# ECHO OF HIS CALL

## ಕರೆಯ ಪ್ರತಿಧ್ವನಿ

KANNADA

ECHO OF HIS CALL 1969-2019 GOLDEN JUBILEE (ECHO GROUP)

**India's National Spiritual Newspaper** ₹ 10/-

Published monthly in ENGLISH, TAMIL, MALAYALAM, TELUGU, HINDI, KANNADA, MARATHI, BENGALI, GUJARATI, ODIYA, ASSAMESE, PUNJABI, NEPALI, URDU, SINHALA & AFRIKAN

Editor : S. SAM SELVA RAJ | 16 Languages | Associate Editor : Rev. R. Rama Krishna

Vol. XXIV | NOVEMBER 2022 | No. 10


### ಪರಿಶುದ್ಧ ಸತ್ಯವೇದ

**ದಯಮಾಡಿ ಈ ವಾಕ್ಯ ಭಾಗಗಳನ್ನು ಕಂಠ ಪಾಠ ಮಾಡಿರಿ.** (ಕೀರ್ತನೆಗಳು 77:1-11)

1. ದೇವರಿಗೆ ಮೊರೆಯಿಡುವೆನು, ಕೂಗಿ ಮೊರೆಯಿಡುವೆನು; ನನಗೆ ಕಿವಿಗೊಡುವನು.
2. ಇಕ್ಕಟ್ಟಿನಲ್ಲಿ ಸ್ವಾಮಿಯನ್ನು ಕರೆದೆನು; ಬೇಸರವಿಲ್ಲದೆ ಇರುಳೆಲ್ಲಾ ಕೈಯೊಡ್ಡಿ ಕೊಂಡೇ ಇದ್ದೇನು. ನನ್ನ ಮನಸ್ಸು ಶಾಂತಿ ಹೊಂದಲೊಲ್ಲದೆ ಇತ್ತು.
3. ನಾನು ವ್ಯಥೆ ಪಡುತ್ತಾ ದೇವರನ್ನು ಸ್ಮರಿಸುವೆನು; ಮನ ಗುಂದಿದವನಾಗಿಯೇ ಹಂಬಲಿಸುವೆನು.
4. ನಾನು ರೆಪ್ಪೆಗಳನ್ನು ಹಚ್ಚದಂತೆ ಮಾಡಿದಿ. ತಳಮಳ ಗೊಂಡು ಮಾತಾಡಲಾರದೆ ಇದ್ದೆನು.
5. ಹಳೆಯ ದಿನಗಳನ್ನೂ ರಾತನ ವರುಷಗಳನ್ನೂ ಯೋಚಿಸಿದೆನು.
6. ನಾನು ರಾತ್ರಿಯಲ್ಲಿ ಮಾಡುತ್ತಿದ್ದ ಗಾನವನ್ನು ನೆನಸಿ ಕೊಳ್ಳುವೆನು, ನನ್ನ ಅಂತರ್ಯದಲ್ಲಿ ಮಾತಾಡಿಕೊಳ್ಳುವೆನು ಅಂದುಕೊಂಡು ಮನಸ್ಸಿನಲ್ಲಿ ವಿಚಾರಿಸಿ ಕೊಂಡದ್ದೇನೆಂದರೆ -
7. ಕರ್ತನು ಸದಾ ಕಾಲಕ್ಕೂ ಬಿಟ್ಟೇ ಬಿಡುವನೋ? ಆತನು ಪುನಃ ಪ್ರಸನ್ನ ನಾಗುವುದಿಲ್ಲವೋ?
8. ಆತನ ಕೃಪಾ ವಾತ್ಸಲ್ಯವು ನಿಂತೇ ಹೋಯಿತೋ? ಆತನ ವಾಗ್ದಾನವು ಎಂದೆಂದಿಗೂ ಬಿದ್ದೇ ಹೋಯಿತೋ?
9. ದೇವರು ದಯವಿಡಲಿಕ್ಕೆ ಮರೆತು ಬಿಟ್ಟನೋ? ಕೋಪ ದಿಂದ ತನ್ನ ಕರುಳುಗಳನ್ನು ಬಿಗಿ ಹಿಡಿದಿದ್ದಾನೋ?
10. ಮತ್ತೂ ನಾನು ಅಂದುಕೊಂಡದ್ದೇನೆಂದರೆ ಹೀಗೆ ನೆನಸುವುದು ನನ್ನ ಬಲ ಹೀನತೆಯೇ. ಪುರಾತ್ಪರನ ಭುಜ ಬಲವು ಪ್ರಕಟವಾದ ವರುಷಗಳನ್ನು ಜ್ಞಾಪಿಸಿ ಕೊಳ್ಳುವೆನು.
11. ಯೆಹೋವನು ಕೃತ್ಯಗಳನ್ನು ವರ್ಣಿಸುವೆನು; ಪೂರ್ವ ದಿಂದ ನೀನು ನುಡಿಸಿದ ಅದ್ಭುತಗಳನ್ನು ನೆನಪು ಮಾಡಿಕೊಳ್ಳುವೆನು.

# ಕರ್ತನು ನಿಮ್ಮನ್ನು ಕೂಡ ಆಶೀರ್ವದಿಸುವನು!

## THE LORD WILL BLESS YOU ALSO!

**ಆತನು ನಿನಗೆ ಸಹಾಯ ಮಾಡಲಿ; ಸರ್ವಶಕ್ತನಾದ ದೇವರಿಂದಾಯಿತು, ಆತನು ನಿನ್ನನ್ನು ಆಶೀರ್ವದಿಸಲಿ. ಆತನು ಮೇಲಣ ಆಕಾಶದಿಂದಲೂ ಕೆಳಗಣ ಸಾಗರದ ಸೆಲೆಗಳಿಂದಲೂ ಸ್ತನ್ಯದಿಂದಲೂ ಗರ್ಭದಿಂದಲೂ ಉಂಟಾಗುವ ಸೌಭಾಗ್ಯಗಳನ್ನು ಕೊಟ್ಟು ನಿನ್ನನ್ನು ಆಶೀರ್ವದಿಸಲಿ. (ಆದಿಕಾಂಡ 49:25).**



***ಆತನ ಕರೆಯ ಪ್ರತಿಧ್ವನಿಯ ಸೇವೆಯ 54ನೇ ವರ್ಷದ ಆಚರಣೆಯ ಸಮಯದಲ್ಲಿ ಪಾ. ಎಸ್. ಅಬ್ರಹಾಮ ಮೂಲಕ ಕೊಟ್ಟ ಕರ್ತನ ಸಂದೇಶ.***

ಆದಿಕಾಂಡ 49, ನಮ್ಮ ಪೂರ್ವಿಕನಾದ ಯಾಕೋಬನು ತಾನು ಸಾಯುವುದಕ್ಕೆ ಮುಂಚಿತವಾಗಿ ಪ್ರತಿಯೊಬ್ಬ 12 ಮಕ್ಕಳಿಗೆ ಕರ್ತನಿಂದ ಪ್ರಕಟವಾದ ಆಶೀರ್ವಾದಗಳನ್ನು ಕೊಟ್ಟನು.

ಯೋಸೇಫ ಅಂದರೆ ಹೆಚ್ಚಾಗಿ ದಯ ಪಾಲಿಸು, ಮೇಲೆ ಉಲ್ಲೇಖವಾದ ವಚನವು (49:25), ಈ ಆಶೀರ್ವಾದವು ಯೋಸೇಫನಿಗೆ ಕೊಡಲ್ಪಟ್ಟಿತು. ಈ ಆಶೀರ್ವಾದದಲ್ಲಿ ನಾಲ್ಕು ತರಹದ ಆಶೀರ್ವಾದಗಳನ್ನು ನೋಡುತ್ತೇವೆ:

(i) ಪರಲೋಕದಿಂದ ಆಶೀರ್ವಾದಗಳು

(ii) ಕೆಳಗಣ ಸಾಗರದ ಸೆಲೆಗಳಿಂದಲೂ ಆಶೀರ್ವಾದಗಳು

(iii) ತನ್ನ ಮಕ್ಕಳನ್ನು ಪೋಷಿಸುವ ತಾಯಿಗೆ ಸಂಬಂಧಿಸಿದ ಆಶೀರ್ವಾದಗಳು.

(iv) ತಾಯಿಯ ಗರ್ಭಕ್ಕೆ ಸಂಬಂಧಿಸಿದ ಆಶೀರ್ವಾದಗಳು, ಇದು ಅನೇಕ ತಲೆಮಾರುಗಳನ್ನು ಉತ್ಪಾದಿಸುವ ಸಾಮರ್ಥ್ಯವನ್ನು ಹೊಂದಿದೆ, ಆದರೂ ತಾಯಿಯ ಮಗುವಿನ ಜನನದ ಸಮಯದಲ್ಲಿ ಹೆಚ್ಚಿನ ನೋವನ್ನು ಅನುಭವಿಸುತ್ತಾಳೆ.

### 1. ಪರಲೋಕದ ಆಶೀರ್ವಾದಗಳು!

ಪರಲೋಕದಿಂದ ಬರುವಂತಹ ಆಶೀರ್ವಾದಗಳು ಅತ್ಯಂತ ಅತ್ಯುತ್ತಮವಾಗಿರುತ್ತವೆ. ಪ್ರತಿಯೊಬ್ಬ ದೇವ ಮಗುವು ಈ ಆಶೀರ್ವಾದವನ್ನು ಸ್ವೀಕರಿಸಬೇಕು. ನಮ್ಮ ಪುರಾತನ ತಂದೆಯಾದ ಇಸಾಕನು ತನ್ನ ಮಗನಿಗೆ

(3ನೇ ಪುಟಕ್ಕೆ)

# ECHO OF HIS CALL - (1969-2019 GOLDEN JUBILEE YEAR)

## *from your dearly beloved brother...*

ECHO OF HIS CALL 1969-2019
(ECHO GROUP)





### OUR MISSION POLICY

We should expound and teach the contemporary generation the undiluted teachings of the ancient and early Apostles. It is the need of the hour.

CHIEF EDITOR
Angeline Selvakumari Henry, M.A., M.Ed.
MANAGING EDITOR
Pastor Alex Samson Sam, B.Th., M.Div.
ADMINISTRATION
Bro. N. Prakasam, M.A., General Manager
EDITORIAL BOARD
Sis. Jesy Veena Sam
Sis. Serena Bevin, M.A., M.Phil., B.Ed.
Rev. Dr. K.R. Rajasekaran
Dr. A. Richard Samuel, M.A., Ph.D.
EDITOR, PUBLISHER & PRINTER
Pastor S. SAM SELVA RAJ
Echo of His Call Printers
10, Mohammed Abdullah 2nd Street,
Chepauk, Chennai- 600 005, India.
Phone : (+ 91- 44) 2852 8282, 2852 9293, 2854 7766
Cell : (+91) 98410 71852, 95661 31858
CORE LEADERS
Bro. K. Puratchivendan
Bro. A. Edward Durai
Bro. A. Alvin
Bro. K. Abraham
Sis. Dhanalakshmi Chinnaiah
E.mail ID
sam@echoofhiscall.org
biblecor@yahoo.co.in
WEBSITES
www.echoofhiscall.org
www.stpaulsmatriculation.com
YOUTUBE CHANNEL
Echo of His Call

**ಯೆಹೋವನು ಪ್ರಸನ್ನ ಮುಖದಿಂದ ನಿಮ್ಮನ್ನು ನೋಡಿ ನಿಮ್ಮ ಮೇಲೆ ದಯವಿಡಲಿ (ಅರಣ್ಯಕಾಂಡ 6:26)**

**ನಿಮ್ಮ ಪ್ರೀತಿಯ ಸಹೋದರನಿಂದ,**

ಕ್ರಿಸ್ತ ಯೇಸುವಿನಲ್ಲಿ ನನ್ನ ಪ್ರೀತಿಯ ಸ್ನೇಹಿತರೇ,

ನಮ್ಮ ರಕ್ಷಕನಾದ ಯೇಸುಕ್ರಿಸ್ತನ ಮತ್ತು ಕರ್ತನಾದ ಅದ್ಭುತವಾದ ನಾಮದಲ್ಲಿ ನಾವು ನಿಮಗೆ ಪ್ರೀತಿಯ ಶುಭಾಶಯಗಳನ್ನು ತಿಳಿಸುತ್ತೇವೆ.

ದೇವರ ಅಪಾರ ಕರಣೆಯಿಂದ 2022 ರ ಅಂತ್ಯವು ವೇಗವಾಗಿ ಸಮೀಪಿಸುತ್ತಿದೆ. ಪ್ರಪಂಚದಾದ್ಯಂತದ ಜನರು ತಮ್ಮನ್ನು ತಾವು ಸಿದ್ಧಪಡಿಸಿಕೊಳ್ಳುತ್ತಿದ್ದಾರೆ ಮತ್ತು ಯೇಸು ಕ್ರಿಸ್ತನ ಜನ್ಮ ಮತ್ತು 2023 ರ ಹೊಸ ವರ್ಷದ ಉದಯವನ್ನು ಆಚರಿಸಲು ಕುತೂಹಲದಿಂದ ಕಾಯುತ್ತಿದ್ದಾರೆ. ಆತ್ಮೀಕ ಜನರಾದ ನಾವುಗಳು, ಈ ದಿನಗಳನ್ನು ನಾವು ಬಹಳ ಗಂಭೀರವಾಗಿ ಆತ್ಮೀಕದಾರಿಯಲ್ಲಿ ತೆಗೆದುಕೊಳ್ಳಬೇಕು. ನಮ್ಮನ್ನೇ ನಾವು ಅತ್ಯಾಸಕ್ತಿಯ ಪ್ರಾರ್ಥನೆ ಮತ್ತು ನಿಜವಾದ ದೇವರ ಸೇವೆಯಲ್ಲಿ ತೊಡಗಿಸಿಕೊಳ್ಳಬೇಕು.

ಪ್ರಾರ್ಥನೆ ಮತ್ತು ಸೇವೆಯು ಒಂದು ನಾಣ್ಯದ ಎರಡು ಮುಖಗಳು. ನಾವು ಬಹಳಷ್ಟು ಜನರು ದೇವರ ಸೇವೆಯಲ್ಲಿ ನಿರತರಾಗಿರುವುದನ್ನು ನೋಡುತ್ತೇವೆ ಆದರೆ ಅವರ ಪ್ರಾರ್ಥನೆ ವೇಳಾಪಟ್ಟಿಯನ್ನು ಬಿಟ್ಟು ಬಿಡುತ್ತಾರೆ. ಇದು ಆಧ್ಯಾತ್ಮಿಕ ಆಯಾಸ ಮತ್ತು ಹಿನ್ನಡೆಗೆ ಕಾರಣವಾಗುತ್ತದೆ.

ಇಂದು ಬೆಳಿಗ್ಗೆ ದೇವರು ನನಗೆ ನೀಡಿದ ಕೈಯಿಂದ ಬರೆದ ಸಂಕ್ಷಿಪ್ತ ಆಲೋಚನೆಯನ್ನು ನಾನು ನಿಮ್ಮೊಂದಿಗೆ ಹಂಚಿಕೊಳ್ಳುತ್ತೇನೆ.

ಜನರ ನಡುವಿನ ಒಡನಾಟವು ಕೆಲವೊಮ್ಮೆ ಕೆಲವು ಕಹಿ ಭಾವನೆಗಳನ್ನು ತರುತ್ತದೆ. ನಾವು ಪರಿಪೂರ್ಣ ಜನರಲ್ಲ ಆದರೆ ಪ್ರತಿದಿನ ಪರಿಪೂರ್ಣವಾಗುವುದಕ್ಕೆ ಮಾರ್ಪಡುತ್ತಿದ್ದೇವೆ. ನಾವು ಪವಿತ್ರಾತ್ಮಕ್ಕೆ ತೆರೆದುಕೊಂಡರೆ ನಮ್ಮನ್ನು ಪರಿಷ್ಕರಿಸಲು ಮತ್ತು ನಮ್ಮನ್ನು ಬದಲಾಯಿಸಲು ದೇವರು ಜನರನ್ನು ಬಳಸುತ್ತಾನೆ. ಆದರೆ ಯಾವಾಗಲೂ ಪ್ರಾರ್ಥಿಸು ಜನರು ಕೋಪ ಮತ್ತು ಸಂದೇಹಕ್ಕೆ ಅವಕಾಶ ನೀಡುವುದಿಲ್ಲ. ಜಗಳ ಮತ್ತು ಜಗಳಗಳ ಉಪಸ್ಥಿತಿಯು ಪ್ರಾರ್ಥನೆಯ ಅನುಪಸ್ಥಿತಿಯ ಕಾರಣದಿಂದಾಗಿರುತ್ತದೆ. ಪ್ರಾರ್ಥನೆ ರಹಿತ ವ್ಯಕ್ತಿಯು ಎರಡು ಮೂಲಗಳಿಗೆ ಕಾರಣವಾಗುತ್ತಾನೆ. ಜಗಳ ಅಥವಾ ಹಿಂಜರಿಯುವಿಕೆ. ಒಡನಾಟದಲ್ಲಿ ಉಂಟಾಗುವ ಸವಾಲುಗಳು ಮತ್ತು ತೊಂದರೆಗಳನ್ನು ಸ್ಪಷ್ಟವಾಗಿ ತಿಳಿದಿರುತ್ತಾನೆ. ಪುರುಷರು ನಿರಂತವಾಗಿ ಪ್ರಾರ್ಥಿಸಬೇಕೆಂದು ಸಭೆಗೆ ಕಠಿಣ ಕಾನೂನನ್ನು ಮಾಡಿದನು. ಈ ಸಮಸ್ಯೆಯನ್ನು ನಿಭಾಯಿಸುವ ಜವಾಬ್ದಾರಿಯನ್ನು ತಿಮೋಥಿಗೆ ನೀಡಲಾಯಿತು. ಅಪೋಸ್ತಲರು ಆದಿ ಸಭೆಯಲ್ಲಿ ಪ್ರಾರ್ಥನೆಗೆ ಕಡಿಮೆ ಸಮಯದೊಂದಿಗೆ ವಿಷಯಗಳನ್ನು ನಿರ್ವಹಿಸುತ್ತಿದ್ದಾಗ, ಅವರು ಸಮಸ್ಯೆಗಳನ್ನು ನೋಡಿದರು, ಅಸಂತುಷ್ಟಿ ಮತ್ತು ಜಗಳು ಬೆಳೆಯುತ್ತಿತ್ತು. ಅವರು ತಕ್ಷಣ ಪ್ರಾರ್ಥನೆ ಇಲ್ಲದಿರುವಿಕೆಯ ಸಮಸ್ಯೆಯನ್ನು ಗುರುತಿಸಿದರು.

ಪ್ರಾರ್ಥನೆಗೆ ಅಗತ್ಯವಾದ ವ್ಯವಸ್ಥೆಗಳನ್ನು ಮಾಡಿದಾಗ, ಮತ್ತೆ ಒಡನಾಟದ ಸಿಹಿತನವು ಮುಂದುವರಿಯಿತು (ಅಪೋಸ್ತಲ 6:4).



*Key Leaders of our ministry in Chennai*

**Our Ministries:** ECHO OF HIS CALL Monthly Magazines (16 languages) ◘ BIBLECOR - Postal Courses (3 languages) ◘ Online Courses ◘ Theological Correspondence Courses (2 languages) ◘ Church Planting ◘ Nehemiah Bible Colleges ◘ Gospel Printing Press ◘ Great Commission Partners ◘ St. Paul's Matriculation School ◘ Crusades ◘ Community Development

ಪ್ರಾರ್ಥನೆ ಸೋತಾಗ, ಪವಿತ್ರತೆಯು ಸೋತು ಹೋಗುತ್ತದೆ. ಎಲ್ಲಾ ರೀತಿಯ ಪಾಪಗಳು ಕಣ್ಣುಗಳ ಕಾಮದಿಂದ ಬರುತ್ತವೆ. ಶರೀದಾಶೆ ಮತ್ತು ಜೀವನದ ಸೊಕ್ಕು. ವೈಯಕ್ತಿಕ ರಕ್ಷಣೆಯು ನಾಶವಾಗುವುದಕ್ಕೆ ಕಾರಣವಾಗುತ್ತದೆ ಮತ್ತು ಯೇಸುವಿನ ದೇಹ. ಅಲ್ಲಿ ಯಾವುದೇ ಸಂತೃಪ್ತಿ ಇರುವುದಿಲ್ಲ. ದೂರುವಿಕೆ, ಗುಣುಗುಟ್ಟವಿಕೆ, ತಪ್ಪು ಹುಡುವಿಕೆ, ಟೀಕೆ ಮತ್ತು ದೂಷಣೆಗಳು ಬೆಳೆಯುತ್ತವೆ. ಇವೆಲ್ಲಗಳು ಪ್ರಾರ್ಥನೆ ರಹಿತ ಫಲಗಳು ಆಗಿವೆ. ಸಂದೇಹವು ನೋವಿನ ಅಂತ್ಯಗಳಿಗೆ ದಾರಿ ಮಾಡಿ ಕೊಡುತ್ತದೆ. ಜನರು ಪ್ರಾರ್ಥನೆಯಲ್ಲಿ ಸೋತು ಹೋಗುತ್ತಾರೋ ಇವೆಲ್ಲಗಳು ಆಗುತ್ತವೆ. ಪ್ರಾರ್ಥನೆ ರಹಿತದ ಕಾರಣ ಒಡನಾಟವು ಸೋತು ಹೋಗುತ್ತದೆ. ಪ್ರಾರ್ಥನೆಯು ಆತ್ಮದ ಫಲವನ್ನು ಉತ್ಪಾದಿಸುವ ಜೀವಾಳವಾಗಿದೆ.

**ನಮ್ಮ ಮುಖ್ಯ ನಾಯಕರುಗಳಿಗೆ ಆತ್ಮೀಕ ಕಾರ್ಯಕ್ರಮ**

12ಸೆಪ್ಟೆಂಬರ್ 2022 ರಂದು ಸಂಜೆ 5:00 ರಿಂದ ಒಡನಾಟ ಮತ್ತು ಪ್ರಾರ್ಥನೆಗಾಗಿ ಚೆನ್ನೈನಲ್ಲಿ ನಮ್ಮ ಸೇವೆಯ ಪ್ರಮುಖ ನಾಯಕರ ವಿಶೇಷ ಸಭೆಯನ್ನು ನಾವು ಹೊಂದಿದ್ದೇವು. ದೇವರು ಆಶೀರ್ವದಿಸಿದನು. ಸಹೋದರರೇ, ನಮಗೋಸ್ಕರ ಪ್ರಾರ್ಥಿಸಿರಿ (1 ಥೆಸಲೋನಿಕ). ದೇವರು ನಿಮ್ಮನ್ನು ಆಶೀರ್ವದಿಸಲಿ.

**ಕ್ರಿಸ್ತ ಯೇಸುವಿವಲ್ಲಿ ನಿಮ್ಮ ಸೇವಕರುಗಳು,**

**ಪಾ. ಎಸ್ ಸ್ಯಾಮ್ ಸೆಲ್ವರಾಜ್ ಮತ್ತು ಅಲೆಕ್ಷೆ ಸ್ಯಾಮಸನ್ ಸ್ಯಾಮ್**


(+91) 98412 71858 / 98410 71858, E.mail : samselvaraj333@gmail.com

*(1ನೇ ಪುಟದಿಂದ)*

ಪರಲೋಕದ ಆಶೀರ್ವಾದಗಳನ್ನು ಮೊದಲು ಕೊಡುತ್ತಾನೆ. ದೇವರು ನಿನಗೆ ಆಕಾಶದ ಮಂಜನ್ನೂ ಸಾರವುಳ್ಳ ಭೂಮಿಯನ್ನು ಕೊಟ್ಟು ದವಸ ಧಾನ್ಯಗಳನ್ನೂ ದ್ರಾಕ್ಷಾರಸವನ್ನೂ ಹೇರಳವಾಗಿ ಅನುಗ್ರಹಿಸಲಿ (ಆದಿಕಾಂಡ 27:28). ಈ ಆಶೀರ್ವಾದಕ್ಕೆ ಅನುಸಾರವಾಗಿ, ಕರ್ತನಾದ ದೇವರು ಯಾಕೋಬನಿಗೆ ಕೊಟ್ಟಂತೆ, ಇಸಾಕ್ ಹೇಳಿದ ಎಲ್ಲವನ್ನೂ. ಆದಿಕಾಂಡ 1:1ರಲ್ಲಿ ಈ ರೀತಿಯಾಗಿ ಓದುತ್ತವೆ, ಆದಿಯಲ್ಲಿ ದೇವರು ಆಕಾಶವನ್ನೂ ಭೂಮಿಯನ್ನು ಉಂಟು ಮಾಡಿದನು. ಆದ್ದರಿಂದ ಸತ್ಯವೇದವು ಮೊದಲು ಆಕಾದವು ಸೃಷ್ಟಿಸಲ್ಪಟ್ಟಿತ್ತು ಎಂದು ಸೂಚಿಸುತ್ತದೆ. ದೇವರು ಆಕಾಶಕ್ಕೆ ಮಹತ್ತರವಾದ ಪ್ರಾಮುಖ್ಯತೆ ಯನ್ನು ಕೊಟ್ಟಿದ್ದಾನೆ.



**ದೇವರು ವಾಗ್ದಾನ ಮಾಡಿದ್ದನ್ನು ಅಬ್ರಹಾಮನು ಅನುಮಾನಿಸಿದಾಗ "ದೇವರು ಅವನನ್ನು ಹೊರಗಡೆ ಕರೆದುಕೊಂಡು ಬಂದು ಆಕಾಶವನ್ನು ನೋಡು ಎಂದು ಕೇಳಿಕೊಂಡನು". ಆಕಾಶ ಕಡೆಗೆ ನೋಡು, ನಕ್ಷತ್ರಗಳನ್ನು ಲೆಕ್ಕಿಸುವುದು ನಿನ್ನಿಂದಾದರೆ ಲೆಕ್ಕಿಸು; "ನಿನ್ನ ಸಂತಾನವು ಅಷ್ಟಾಗುವುದು ಅಂದನು."** ಆದಿಕಾಂಡ 15:5. ನಾವು ಈ ಲೌಕಿಕ ಜೀವನದಲ್ಲಿ



ಆಯಾಸಗೊಂಡಾಗ, ದೇವರು ನಮಗೆ ಸೂಚಿಸುವ ಆಕಾಶದ ಆಶೀರ್ವಾದಗಳಿಂದಾಗಿ ನಮ್ಮ ದುಃಖಗಳು ಸಂತೋಷವಾಗಿ ಬದಲಾಗುತ್ತವೆ. ಚಿಕ್ಕ ಹುಡುಗನು ಯೇಸುವಿನ ಬಳಿಗೆ ಬಂದನು. ಅವನ ಹತ್ತಿರ 5 ರೊಟ್ಟಿಗಳು ಮತ್ತು 2 ಮೀನುಗಳು ಇದ್ದವು. ಆ ಆಹಾರವು ಕರ್ತನಾದ ಯೇಸು ಕ್ರಿಸ್ತನ ಕೈಯಲ್ಲಿ ಬಂದಾಗ 5,000 ಸಾವಿರಕ್ಕಿಂತ ಹೆಚ್ಚು ಜನರ ಹಸಿವೆಯನ್ನು ನೀಗಿಸಿತು. ಹೇಗೆ ಚಿಕ್ಕ ಹುಡುಗನ ಆಹಾರವು ಹಸಿವೆಯಿಂದ ಇರುವ ಆನೇಕ ಜನರನ್ನು ಊಣ ಬಡಿಸಿತು? ಈ ಅದ್ಭುತವು ಹೇಗಾಯಿತು? ಯೇಸು ಕ್ರಿಸ್ತನು ಆಹಾರವನ್ನು ಆಕಾಶದ ಕಡೆಗೆ ಎತ್ತಿ ಸ್ವರ್ಗದ ಆಶೀರ್ವಾದವನ್ನು ಪಡೆದ ಕಾರಣ ಅಲ್ಲವೇ?

ಯೇಸು ಕ್ರಿಸ್ತನು ತನ್ನ ಸೇವೆಯಲ್ಲಿ ಅನೇಕ ಸಾರಿ ಪರಲೋಕಕ್ಕೆ ನೋಡುವ ಅಭ್ಯಾಸವಿತ್ತು. ಪರಲೋಕದ ಆಶೀರ್ವಾದಗಳು ದೇವರು ವಾಸಿಸುವ ಪರಲೋಕ ವಾಸ ಸ್ಥಾನದಿಂದ ಶಕ್ತಿಯನ್ನು ತರುತ್ತದೆ. ಇದು ಪರಲೋಕ ಆಶೀರ್ವಾದಗಳ ಮಹಿಮೆಯಿಂದಾಗಿ, ಚಿಕ್ಕ ಹುಡುಗನಿಗೆ ಸಾಕಾಗುವ ಆಹಾರವು ಎಷ್ಟು ಶಕ್ತಿಯುತವಾಗಲು ಸಾಧ್ಯವಾಯಿತು ಎಂದರೆ ಅದು ಸಾವಿರಾರು ಜನರ ಹಸಿವನ್ನು ತೆಗೆದು ಹಾಕಿತು. ಪರಲೋಕದ ಮಹಿಮೆಯನ್ನು ರುಜುವಾತು ಪಡಿಸುವುದಕ್ಕೆ ಇನ್ನೊಂದು ಘಟನೆಯನ್ನು ನೋಡೋಣ. ಮಾರ್ಕ 7:33,34 ರಲ್ಲಿ ಓದುತ್ತೇವೆ, **ಆತನು ಅವನನ್ನು ಜನರ ಗುಂಪಿನಿಂದ ಒತ್ತಟ್ಟಿಗೆ ಕರಕೊಂಡು ಹೋಗಿ ತನ್ನ ಬೆರಳುಗಳನ್ನು ಅವನ ಕಿವಿಗಳಲ್ಲಿ ಇಟ್ಟು ಉಗುಳಿ ಅವನ ನಾಲಿಗೆಯನ್ನು ಮುಟ್ಟಿ ಆಕಾಶದ ಕಡೆಗೆ ನೋಡಿ ನಿಟ್ಟುಸಿರುಬಿಟ್ಟು ಅವನಿಗೆ ಎಫ್ಫಥಾ ಎಂದು ಹೇಳಿದನು. ಆ ಶಬ್ದಕ್ಕೆ ತೆರೆಯಲಿ ಎಂದರ್ಥ. ಲಾಜರನು ಅಸ್ವಸ್ಥನಾದಗ ಆತನನ್ನು ಸ್ವಸ್ಥ ಮಾಡುವುದಕ್ಕೆ ಆಹ್ವಾನಿಸಿದಾಗ, ಆದರೆ ಲಾಜರನನು ಸ್ವಸ್ಥ ಮಾಡುವುದಕ್ಕೆ ಯೇಸು ಕ್ರಿಸ್ತನು ಬರಲಿಲ್ಲ ಅಥವಾ ಅವನು ಮರಣ ಹೊಂದಿದಾಗ.** ಲಾಜರನು ಮರಣ ಹೊಂದಿ ನಾಲ್ಕು ದಿನ ಆದ ಮೇಲೆ ಆ ಸ್ಥಳಕ್ಕೆ ಬಂದನು. ಲಾಜರನು ಯೇಸು ಕ್ರಿಸ್ತನ ಅತಿಪ್ರಿಯ ಸ್ನೇಹಿತನಾಗಿದ್ಯಾಗೂ. ಲಾಜರನ ಸಮಾಧಿಯ ಬಳಿಗೆ ಆತನು ಬಂದು ಈಗಾಗಲೇ ಅವನು ದೇಹವು ವಾಸನೆ ಬರುತ್ತಿತ್ತು (ಯೋಹಾನ 11:39). ಸತ್ಯವೇದ ಯೋಹಾನ 11:41,42 ರಲ್ಲಿ ಹೀಗೆ ಹೇಳುತ್ತದೆ.

**ಯೇಸು ಕಣ್ಣೆತ್ತಿ ಮೇಲಕ್ಕೆ ನೋಡಿ? ತಂದೆಯೇ, ನೀನು ನನ್ನ ಪ್ರಾರ್ಥನೆಯನ್ನು ಕೇಳಿದ್ದಕ್ಕೆ ನಿನ್ನನ್ನು ಕೊಂಡಾಡುತ್ತೇನೆ; ನೀನು ಯಾವಾಗಲೂ ನನ್ನ ಪ್ರಾರ್ಥನೆಯನ್ನು ಕೇಳುವವನಾಗಿದ್ದೀ ಎಂದು ನಿನಗೆ ಗೊತ್ತೇ ಇದೆ.** ಆದಮೇಲೆ, ಪರಲೋಕದ ಆಶೀರ್ವಾದ ಮತ್ತು ಶಕ್ತಿಯನ್ನು ಪಡೆದುಕೊಂಡ ಮೇಲೆ. ಅದನ್ನು ಹೇಳಿದ ಮೇಲೆ ದೊಡ್ಡ ಶಬ್ದದಿಂದ-**ಲಾಜರನೇ, ಹೊರಗೆ ಬಾ ಎಂದು ಕೂಗಿದನು** ಯೋಹಾನ 11:43. ಸತ್ತು ನಾಲ್ಕು ದಿನಗಳಿಂದ ಗಬ್ಬು ನಾರುವ ದೇಹವನ್ನು ಹೊಂದಿದ್ದ ಲಾಜರನು ಜೀವಂತವಾಗಿ ಹೊರಗೆ ಬಂದನು. ಸಮಸ್ಯೆ ಎಷ್ಟು ದೊಡ್ಡದಾಗಿದೆ ಎಂಬುದು ಯೇಸು ಕ್ರಿಸ್ತನಿಗೆ ಸಮಸ್ಯೆಯಲ್ಲ. ಆತನು ಸರ್ವಶಕ್ತ ಮತ್ತು ಎಲ್ಲಾ ಶಕ್ತಿಶಾಲಿ ದೇವರಾಗಿರುವುದರಿಂದ ಆತನು ಯಾವುದೇ ಸಮಸ್ಯೆಗಿಂತ ದೊಡ್ಡವನು. ನಮ್ಮ ಕರ್ತನಾದ ದೇವರ ಶಕ್ತಿಯನ್ನು ಉರಳಿಸುವ ಪರಲೋಕ ಆಶೀರ್ವಾದವು ಯಾವುದೇ ಸಮಸ್ಯೆಗಿಂತ ದೊಡ್ಡದಾಗಿದೆ. ಮೇಲಾಗಿ, ಇದು ಪ್ರಾಮಾಣಿಕವಾಗಿ ನಂಬುವ ಎಲ್ಲರಿಗೂ ದೇವರ ರಾಜ್ಯವನ್ನು ನೀಡುತ್ತದೆ. ತರುವಾಯ ಇಸ್ರಾಯೇಲ್ಯರ ಸಮೂಹವೆಲ್ಲಾ ಯೆಹೋವನ ಅಪ್ಪಣೆಯ ಪ್ರಕಾರ ಸೀನ್ ಎಂಬ ಅರಣ್ಯದಿಂದ ಹೊರಟ ಮುಂದೆ ಪ್ರಯಾಣ ಮಾಡಿ ರೆಫೀದೀಮಿನಲ್ಲಿ ಇಳು ಕೊಂಡರು. ಕುಡಿಯುವುದಕ್ಕೆ ನೀರಿಲ್ಲದ ಕಾರಣ ಜನರು ಮೋಶೆಯ ಸಂಗಡ ವಾದಿಸುತ್ತಾ ನಮಗೆ ಕುಡಿಯುವುದಕ್ಕೆ ನೀರು ದೊರಕಿಸಿ ಕೊಡಬೇಕು ಎಂದು ಹೇಳಿದಾಗ ಮೋಶೆ ನೀವು ನನ್ನ ಸಂಗಡ ವಾದಿಸುವುದೇನು? ಯೆಹೋವನನ್ನು ಯಾಕೆ ಪರೀಕ್ಷಿಸುತ್ತೀರಿ ಎಂದು ಅವರಿಗೆ ಹೇಳಿದನು. ಅಲ್ಲಿ ಜನರು ನೀರಿಲ್ಲದೆ ಬಾಯಾರಿಕೆಯ ಸಂಕಟದಿಂದ ಮೋಶೆಯ ಮೇಲೆ ಗುಣುಗುಟ್ಟುತ್ತಾ ನೀನು ನಮ್ಮನ್ನೂ ನಮ್ಮ ಮಕ್ಕಳನ್ನೂ ದನಗಳನ್ನೂ ಐಗುಪ್ತ ದೇಶದಿಂದ ಕರತಂದು ಈಗ ನೀರಿಲ್ಲದೆ ಸಾಯುವ ಹಾಗೆ ಮಾಡಿದ್ದೇಕೆ ಎಂದರು. **ಆಗ ಮೋಶೆ ಯೆಹೋವನಿಗೆ ಮೊರೆಯಿಟ್ಟು - ಈ ಜನರಿಗೋಸ್ಕರ ನಾನೇನು ಮಾಡಲಿ? ಅವರು ನನ್ನನ್ನು ಕಲ್ಲೆಸೆದು ಕೊಲ್ಲುವ ಹಾಗಿದ್ದಾರಲ್ಲ ಅಂದನು** (ವಿಮೋಚನಕಾಂಡ 17:1-4). ಆ ಒಂದು ಒಣ ನೆಲದಲ್ಲಿ, ಅದ್ಭುತವಾದ ರೀತಿಯಲ್ಲಿ ಪರಲೋಕದ ಆಶೀರ್ವಾದಗಳು ಕೆಳಗೆ ಬರುತ್ತೇವೆ ಮತ್ತು **ಬಂಡೆಯಿಂದ ನೀರು ಬಂತು.** (ವಿಮೋಚನ ಕಾಂಡ 17:5-6).

ಯಾಕೋಬನು ಬರ್ಷೇಬನು ಬಿಟ್ಟು ಹಾರನ್‌ಗೆ ಹೋದಾಗ, ಅವನು ಪರದೇಸಿಯಾಗಿ ಮನೆಯಿಲ್ಲದವನಾಗಿ ಆ ಸ್ಥಳದಲ್ಲಿ ಇದ್ದನು. ಅಲ್ಲಿ ಅವನಿಗೆ ಹಾಸಿಗೆ ಅಥವಾ ತಲೆಗಿಂಬು ಇರಲಿಲ್ಲ. ಅವನು ತಲೆದಿಂಬಿಗೆ ಬದಲಾಗಿ ಕಲ್ಲನ್ನು ಉಪಯೋಗಿಸಿದನು. ಅವನು ತನ್ನ ಭವಿಷ್ಯತ್ತಿನ ಬಗ್ಗೆ ಏನು ತಿಳಿಯದವನಾಗಿ ಮಲಗಿದನು. ಜೀವನದ ಜ್ಞಾನದಲ್ಲಿ ಅವನು ಆರಂಭಿಕನಾಗಿದ್ದನು ಮತ್ತು ದೊಡ್ಡ ಮಾನಸಿಕ ಒತ್ತಡವಿತ್ತು. ಅಲ್ಲಿ ಅವನು ಒಂದು ಕನಸನ್ನು ಕಂಡನು. ಆ ರಾತ್ರಿ ಅವನು ಕನಸು ಕಂಡನು **ಆ ಕನಸಿನಲ್ಲಿ ಒಂದು ನಿಚ್ಚಣಿಗೆ ನೆಲದ ಮೇಲೆ ನಿಂತಿತ್ತು; ಅದರ ತುದಿ ಆಕಾಶವನ್ನು ಮುಟ್ಟಿತ್ತು; ಅದರ ಮೇಲೆ ದೇವದೂತರು ಹತ್ತುತ್ತಾ ಇಳಿಯುತ್ತಾ ಇದ್ದರು. ಇದಲ್ಲದೆ ಯೆಹೋವನು ಅವನ ಬಳಿಯಲ್ಲಿ ನಿಂತು ನಾನು ನಿನ್ನ ತಂದೆಯಾದ ಅಬ್ರಹಾಮನ ದೇವರೂ ಇಸಾಕನ ದೇವರೂ ಆಗಿರುವ ಯೆಹೋವನು. ನೀನು ಮಲಗಿಕೊಂಡಿರುವ ಈ ದೇಶವನ್ನು ನಿನಗೂ ನಿನ್ನ ಸಂತತಿಗೂ ಕೊಡುತ್ತೇನೆ ನಿನ್ನ ಸಂತತಿಯು ಭೂಮಿಯ ಧೂಳಿನಂತೆ ಅಸಂಖ್ಯವಾಗುವುದು** (ಆದಿಕಾಂಡ 28:12,13).

ಒಬ್ಬ ದೇವರ ಸೇವಕನು 5000 ಆಸನ ಸಾಮರ್ಥ್ಯದ ಸಭೆಯನ್ನು ನಿರ್ಮಿಸಿದನು, ಅವನ ಎಲ್ಲಾ ಉಳಿತಾಯ ಮತ್ತು ಜನರು ನೀಡಿದ ಕಾಣಿಕೆಗಳಿಂದ. ಕೆಲವೇ ತಿಂಗಳುಗಳಲ್ಲಿ ಆತನು ಹಲವಾರು ಸಮಸ್ಯೆಗಳ ನಡುವೆ ನಿರ್ಮಿಸಿದ ಸಭೆಗೆ ದೊಡ್ಡ ಬಿರುಗಾಳಿ ಅಪ್ಪಳಿಸಿ ಮತ್ತು ಕಟ್ಟಡವು ಕುಸಿಯಿತು. ಆತನು ದೊಡ್ಡ ಸಂಕಷ್ಟಗಳಿಲ್ಲ ಇದ್ದಾಗ್ಯೂ ಅತನು ದೇವರಿಗೆ ಸ್ತೋತ್ರ ಸಲ್ಲಿಸಿದನು. ಆನೇಕರು ಆತನನ್ನು ಅಪಹಾಸ್ಯ ಮಾಡಿದರು. ಇಂತಹ ಸಮಸ್ಯೆಗಳ ಮಧ್ಯದಲ್ಲಿ, ಆತನನ್ನು ಕೆಲವು ಜನರು ಬಂದು ನೀನು ನಮ್ಮ ಸಭೆಯಲ್ಲಿ ಭೋದನೆಯನ್ನು ಮಾಡುತ್ತೀರಿ ಎಂದು ಕೇಳಿದರು. ಇದು ಆತನಿಗೆ ಸಂತ್ವಾನ ತರುತ್ತದೆ ಎಂದು ತಿಳಿದುಕೊಂಡು ಅವರು ಮನವಿಯನ್ನು ಸ್ವೀಕರಿಸಿಕೊಂಡನು. ಅನೇಕ ತಿಂಗಳು ಅತನು ಪ್ರಸಂಗ ಮಾಡುವ ಸೇವೆಯಲ್ಲಿ ತೊಡಗಿಕೊಂಡನು. ಆತನು ಪ್ರಸಂಗ ಮಾಡಿದಾಗ ಜನರು ದೇವರ ಮಹಿಮೆಯನ್ನು ಅನುಭವಿಸಿದ್ದರಿಂದ ಅನೇಕ ಜನರು ಆರಾಧನೆಗೆ ಬರುವದಕ್ಕೆ ಪ್ರಾರಂಭಿಸಿದರು. ಅನೇಕ ಜನರು ಹೊಸ ಜೀವನವನ್ನು ಪಡೆದುಕೊಂಡರು. ಅಲ್ಲಿ ಸುಮಾರು ಎರಡು ಲಕ್ಷ ಜನರ ಗುಂಪಿಗೆ ಉಪದೇಶ ಮಾಡಲು ಪ್ರಾರಂಭಿಸಿದಾಗ, ಆತನು ಕರ್ತನ ಮೃದುವಾದ ಧ್ವನಿಯನ್ನು ಬಹಳ ಸ್ಪಷ್ಟವಾಗಿ ಕೇಳಿದನು. ಆತನು ಕರ್ತನ ಧ್ವನಿಯನ್ನು ಬಹಳ ಸಂತೋಷದಿಂದ ಕೇಳಿದನು. ಕರ್ತನು ಅವನಿಗೆ ಹೀಗೆ ಹೇಳಿದನು, ನೀನು ಕೇವಲ 5,000 ಜನರಿಗೆ ಬೇಕಾಗುವುದಿಲ್ಲ, ನಾನು ನಿನ್ನನ್ನು ಲಕ್ಷಗಟ್ಟಲೆ ಜನರಿಗೋಸ್ಕರ ಉಪಯೋಗಿ ಸುವುದಕ್ಕಾಗಿ ನಿನ್ನ ಮುಂಚಿನ ಸಭೆಯನ್ನು ಕೆಡವಿದೆನು.

ಕರ್ತನು ಬಲೆಯನ್ನು ಕೆಡವಿದನು, ಅದ್ದರಿಂದ ಹಕ್ಕಿ ತನ್ನಷ್ಟಕ್ಕೇ ಹಾರಲು ಕಲಿಯಬೇಕು ಮತ್ತು ತನ್ನ ಆಹಾರವನ್ನು ತಾನೇ ಭೇಟಿ ಯಾಡಬೇಕು. ಯಾಕೋಬನು ತನ್ನ ಕನಸ್ಸಿನಲ್ಲಿ ಯಾವ ಏಣಿಯನ್ನು ನೋಡಿದನು? ಏಣಿಯ ಮೇಲೆ ಕರ್ತನನ್ನು ಅವನು ನೋಡಿದನು. ಏಣಿಯ ಬಗ್ಗೆ ತಿಳಿದುಕೊಳ್ಳಬೇಕೆಂದರೆ ನಾವು ಯೋಹಾನ 1:51 ರ ಕಡೆಗೆ ತಿರುಗಿಸೋಣ; **ಇದಲ್ಲದೆ ಅವನಿಗೆ ನಾನು ನಿಮಗೆ ನಿಜ ನಿಜವಾಗಿ ಹೇಳುತ್ತೇನೆ, ಪರಲೋಕವು ತೆರೆದಿರುವುದನ್ನೂ ಮನುಷ್ಯ ಕುಮಾರನ ಮೇಲೆ ದೇವದೂತರು ಏರಿ ಹೋಗುತ್ತಾ ಇಳಿದು ಬರುತ್ತಾ ಇರುವುದನ್ನೂ ನೋಡುವಿರಿ ಎಂದು ಹೇಳಿದನು.** ಆ ಏಣಿಯು ಸ್ವತಃ ಯೇಸು ಕ್ರಿಸ್ತನಾಗಿದ್ದಾನೆ. ಯೇಸು ಕ್ರಿಸ್ತನು ನಿಮ್ಮ ಪ್ರಾರ್ಥನೆಗಳನ್ನು ತಂದೆಯಾದ ದೇವರಿಗೆ ಕೊಂಡೊಯ್ಯುವ ಏಣಿಯಾಗಿದ್ದಾನೆ. ಆತನ ಪ್ರಾರ್ಥನೆಗಳು ಕೆಳಗೆ ಬರುತ್ತೇವೆ. **ಆತನ ತಲೆಯ ಕೂದಲು ಬಿಳೀ ಉಣ್ಣೆಯಂತೆಯೂ ಹಿಮದಂತೆಯೂ ಬೆಳ್ಳಗಿತ್ತು. ಆತನ ಪಾದಗಳು ಕುಲುಮೆಯಲ್ಲಿ ಕಾಯಿಸಿದ ತಾಮ್ರದಂತೆಯೂ ಆತನ ಧ್ವನಿಯು ಜಲಪ್ರವಾಹದ ಘೋಷ ದಂತೆಯೂ ಇದ್ದವು.** ಪ್ರಕಟನೆ 1:14-15. ಪ್ರಖರವಾಗಿ ಹೊಳೆಯು ಸೂರ್ಯನಂತಿದ್ದ ಯೇಸು ಕ್ರಿಸ್ತನು ನಮಗೆ ಏಣಿಯಂತಾಗುತ್ತಾನೆ ಮತ್ತು ಆತನು ಯಾವಾಗಲೂ ನಮ್ಮೊಂದಿಗಿದ್ದಾನೆ ಮತ್ತು ನಮ್ಮನ್ನು ಎಂದಿಗೂ ಕೈಬಿಡದೆ ರಕ್ಷಿಸುತ್ತಾನೆ. ಯೋಬ 9:11ರಲ್ಲಿ ಈ ರೀತಿಯಾಗಿ ಓದುತ್ತೇವೆ, **ಆಹಾ, ಆತನು ನನ್ನ ಪಕ್ಕದಲ್ಲಿ ದಾಟಿ ಹೋದರೂ ನಾನು ಕಾಣೆನು; ಮುಂದಕ್ಕೆ ಹಾದು ಹೋದರೂ ನನಗೆ ತಿಳಿಯುವುದಿಲ್ಲ.** ನಮ್ಮೊಳಗೆ ಆತನು ಇರುವಾಗ, ಆತನು ಆಶೀರ್ವಾದಗಳನ್ನು ಕೊಡುವುದಕ್ಕೆ ಸಿದ್ಧನಾಗಿದ್ದಾನೆ. ಅದನ್ನು ಅರ್ಥ ಮಾಡಿ ಕೊಳ್ಳುವುದರಲ್ಲಿ ನಾವು ಸೋತು ಹೋಗಿದ್ದೇವೆ.

## 2. ಭೂಲೋಕ ಆಶೀರ್ವಾದಗಳು!

ನಾವು ಪರಲೋಕದ ಆಶೀರ್ವಾದಗಳನ್ನು ಸ್ವೀಕರಿಸಿದಾಗ, ಆತನು ಭೂಲೋಕದ ಆಶೀರ್ವಾದಗಳನ್ನು ಕೂಡ ಆತನು ಕೊಡುತ್ತಾನೆ. ಭೂಲೋಕದ ಆಶೀರ್ವಾದಗಳು ಕೂಡ ಬಹಳ ಪ್ರಾಮುಖ್ಯವಾಗಿವೆ. ಯೆಹೋವನು ಸೀನಾಯಿ ಬೆಟ್ಟದಲ್ಲಿ ಮೋಶೆಯ ಸಂಗಡ ಮಾತಾಡುವುದನ್ನು ಮುಗಿಸಿದ ಮೇಲೆ ಅವನಿಗೆ ಆ ಎರಡು ಆಜ್ಞಾಶಾಸನಗಳನ್ನು ಕೊಟ್ಟನು. ಅವು ದೇವರ ಕೈಯಿಂದ ಕೆತ್ತಲ್ಪಟ್ಟ ಶಿಲಾಶಾಸನಗಳೇ. ವಿಮೋಚನಕಾಂಡ 31:18. ಪರಲೋಕದ ಆಶೀರ್ವಾದಗಳನ್ನು ಪಡೆದುಕೊಂಡ ಮೇಲೆ ಮೋಶೆಯು ಕಲ್ಲಿನ ಬರೆದ ಕರ್ತನ ಆಜ್ಞೆಗಳನ್ನು ತೆಗೆದುಕೊಂಡು ಬಂದನು. ಇದು ಭೂಲೋಕ ಆಶೀರ್ವಾದವು ಸಿನಾಯಿ ಬೆಟ್ಟದಿಂದ ಆಗಿದೆ. ಭೂಲೋಕದ ಆಶೀರ್ವಾದವು ಜನರನ್ನು ನಡೆಸುವುದಕ್ಕಾಗಿ ಬೇಕಾಗಿದೆ. ಮಕ್ಕಳಿಗೆ ಮಾರ್ಗವನ್ನು ತೋರಿಸುವುದಕ್ಕೆ ಮತ್ತು ಕುಟುಂಬಕ್ಕೆ ಸಹಾಯ. ಮೋಶೆಯು ಬೆಟ್ಟದಿಂದ ಇಳಿದು ಬರುವುದಕ್ಕೆ ತಡ ಮಾಡಿದ್ದರಿಂದ, ಜನರು ಅರೋನನ್ನು ಪ್ರೇರೇಪಿಸಿ ಬಸವನನ್ನು ಮೂರ್ತಿಯನ್ನು ಮಾಡಿ ಆರಾಧನೆ

(6ನೇ ಪುಟಕ್ಕೆ)

नहेम्याह बाइबल कॉलेज
रेसिडेन्शल कॉलेज, चेन्नई।
माध्यम: हिन्दी
सदस्यता के लिए पंजीकृत उम्मीदवार - ATA
सुविख्यात अंतर्राष्ट्रीय मसीही अगुवे तथा पिछले 53 वर्षो से सेवारत वरिष्ठ पासवान
सर्टिफिकेट इन थियोलॉजी – 1 साल
डिप्लोमा ऑफ थियोलॉजी – 2 साल
योग्यता 10 वी या अधिक
जल्दी करें!
Contact : The Chairman, Nehemiah Bible College.
10, MOHAMMED ABDULLAH 2ND STREET, CHEPAUK, CHENNAI - 600 005, INDIA.
Phone : (+91-44) 2852 8282, Cell : (+91) 98410 71852 / 95661 31858
E.mail : sam@echoofhiscall.org / Website : www.echoofhiscall.org
★ ऑनलाइन कक्षाएं उपलब्ध हैं ★

GREAT COMMISSION PARTNERS
ECHO OF HIS CALL MINISTRIES
SINCE 1969

# ಪರಮಾದೇಶದಲ್ಲಿ ಪಾಲುಗಾರರು



ಹಂಚುವುದು (ಗಲಾತ್ಯ.6:2), ಪ್ರೋತ್ಸಾಹಿಸುವುದು (ರೋಮಾಪುರ.12:13 )
ತ್ವರಿತಗೊಳಿಸುವುದು ( II ತಿಮೋಥಿ. 1:6 )

**PRAISE & PRAYER POINTS - From 2022 November 19 To December 18**

**(ಈ ಹಾಳೆಯನ್ನು ಹರಿದು ನಿಮ್ಮ ಸತ್ಯವೇದದೊಳಗಿಟ್ಟು ಇವುಗಳಿಗಾಗಿ ಪ್ರಾರ್ಥಿಸಿರಿ)**

## ಸ್ತೋತ್ರಕ್ಕಾಗಿ ಅಂಶಗಳು

| | | |
|---|---|---|
| ನವಂಬರ್ 19 | : | ನಮ್ಮ ಸತ್ಯವೇದ ಪತ್ರ ವ್ಯವಹಾರದ ಕೋರ್ಸ್ ಮತ್ತು ದೈವಶಾಸ್ತ್ರದ ಪತ್ರ ವ್ಯವಹಾರದ ಬೆಳವಣಿಗೆಗಾಗಿ. |
| ನವಂಬರ್ 20 | : | ನಮ್ಮ ಪ್ರಾರ್ಥನಾ ಸಹಭಾಗಿಗಳು, ಚಂದಾ ಸಹಭಾಗಿಗಳು, ನಂಬಿಕೆಯ ಸಹಭಾಗಿಗಳು, ಜೀವನ ಸಹಭಾಗಿಗಳು, ದೊಡ್ಡ ಆಜ್ಞೆ ಸಹಭಾಗಿಗಳು ಮತ್ತು ಅವರ ಕುಟುಂಬಗಳಿಗಾಗಿ. |
| ನವಂಬರ್ 21 | : | ನಮ್ಮ ಮುದ್ರಾಣಾಲಯ ಮತ್ತು ಆತನ ಕುಟುಂಬಗಳಲ್ಲಿ ನಮ್ಮ ಪತ್ರಿಕೆಯನ್ನು 16 ಭಾಷೆಗಳಲ್ಲಿ ಮುದ್ರಿಸಲು ಮತ್ತು ಪ್ರಕಟಿಸಲು ನಮಗೆ ಅನುವು ಮಾಡಿಕೊಟ್ಟಿದ್ದಾನೆ. |
| ನವಂಬರ್ 22 | : | ಅಕ್ಟೋಬರ್ ತಿಂಗಳನಲ್ಲಿ ನಮ್ಮ ಎಲ್ಲಾ ಅಗತ್ಯತೆಗಳನ್ನು ಪೂರೈಸಿದಕ್ಕಾಗಿ. |
| ನವಂಬರ್ 23 | : | ಆಸ್ಪತ್ರೆಯ ಸೇವೆಯಲ್ಲಿ ಆತನ ಅದ್ಭುತ ಕಾರ್ಯಕ್ಕಾಗಿ. |
| ನವಂಬರ್ 24 | : | ನಮ್ಮ ಮುಖ್ಯ ಸಭೆ ಮತ್ತು ಶಾಖ ಸಭೆಗಳ ವಿಶ್ವಾಸಿಗಳಿಗಾಗಿ. |
| ನವಂಬರ್ 25 | : | ನಮ್ಮ ಸಂತ ಪೌಲ ಮೇಟ್ರಿಕೇಲ್ಯುಷನ್ ಮುಖ್ಯೋಪಾಧ್ಯಾಯರು, ಶಿಕ್ಷಕರು ಮತ್ತು ಸಿಬ್ಬಂದಿ ವರ್ಗದವರಿಗಾಗಿ. |
| ನವಂಬರ್ 26 | : | ನಮ್ಮ ಹಿರಿಯ ಸಭಾ ಪಾಲಕರ ಬಹು ವಿಧದ ಸೇವೆಗಳ ಮೂಲಕ ಸುವಾರ್ತೆಯನ್ನು ಪ್ರಚಾರ ಮಾಡುವ ಅವರ ಬದ್ಧತೆಗಾಗಿ. |
| ನವಂಬರ್ 27 | : | ಆಶೀರ್ವಾದಿಸಲ್ಪಟ್ಟ ಸಭೆ ಮತ್ತು ಹೊಸ ವಿಶ್ವಾಸಿಗಳಿಗಾಗಿ. |
| ನವಂಬರ್ 28 | : | ನಮ್ಮ ಸಂಸ್ಥೆಗೆ ಹೊಸ ನೌಕರಿಗಾಗಿ. |
| ನವಂಬರ್ 29 | : | 12/09/2022 ಆಶೀರ್ವಾದಸಲ್ಪಟ್ಟ ಮುಖ್ಯ ನಾಯಕರುಗಳ ಕೂಟಕ್ಕಾಗಿ. |
| ನವಂಬರ್ 30 | : | 30/09/2022 ರಂದು ಎಲ್ಲಾ ವಿಶ್ವಾಸಿಗಳ ಕೂಟವು ಆಶೀರ್ವಾದಿಸಿದ್ದಕ್ಕಾಗಿ. |
| ಡಿಸೆಂಬರ್ 01 | : | ನಮ್ಮ ಸಿಬ್ಬಂದಿ ವರ್ಗದವರಿಗಾಗಿ ಮತ್ತು ಅವರ ಕುಟುಂಬಗಳನ್ನು ಆಶೀರ್ವಾದಿಸಿದ್ದಕ್ಕಾಗಿ. |
| ಡಿಸೆಂಬರ್ 02 | : | ನಮ್ಮ ಸಹ ಸಂಪಾದಕರು ಮತ್ತು ಅವರ ಸಹಕಾರಕ್ಕಾಗಿ. |
| ಡಿಸೆಂಬರ್ 03 | : | ನಮ್ಮ ಭಾನುವಾರದ ಆರಾಧನೆಗಳು ಮತ್ತು ಮುಖ್ಯ ಸಭೆಯ ಸೇವೆಗಾಗಿ ಮತ್ತು ಶಾಖ ಸಭೆಗಳು ಸುವಾರ್ತೆಯು ತಲುಪದೆ ಇರುವ ಸ್ಥಳಗಳಿಗೆ ಸುವಾರ್ತೆಯನ್ನು ತಲುಪಿದ್ದಕ್ಕಾಗಿ. |

## ಪ್ರಾರ್ಥನೆಗಾಗಿ ಅಂಶಗಳು

| | | |
|---|---|---|
| ಡಿಸೆಂಬರ್ 04 | : | ಎಲ್ಲಾ ದೇಶಗಳಲ್ಲಿ ಶಾಂತಿ ಮತ್ತು ಐಕ್ಯತೆ ಉಂಟಾಗುವುದಕ್ಕಾಗಿ. |
| ಡಿಸೆಂಬರ್ 05 | : | ನಮ್ಮ ಸಂತ ಪೌಲ ಮೇಟ್ರಿಕ್ಯುಲಷನ್ ಶಾಲೆ ಮತ್ತು ನೆಹಮೀಯ ಸತ್ಯವೇದ ಕಾಲೇಜ್ ಸಿಬ್ಬಂದಿ ವರ್ಗದವರು ಮತ್ತು ವಿದ್ಯಾರ್ಥಿಗಳು. |
| ಡಿಸೆಂಬರ್ 06 | : | ಆತನ ಕರೆಯ ಸೇವೆಯ ಸಹ ಸಂಪಾದಕರು ಮತ್ತು ಅವರ ಕಟುಂಬಗಳಿಗಾಗಿ. |
| ಡಿಸೆಂಬರ್ 07 | : | ನಮ್ಮ ಸಿಬ್ಬಂದಿ ಮತ್ತು ಮುದ್ರಾಣಾಲಯದ ಸಮಯದಲ್ಲಿ ನಮ್ಮ ಅವರಣದಲ್ಲಿ ಸುರಕ್ಷಿತಗಾಗಿ ಮತ್ತು ಅವರ ಆರೋಗ್ಯಕ್ಕಾಗಿ. |
| ಡಿಸೆಂಬರ್ 08 | : | ನಮ್ಮ ನೆಹಮೀಯ ಸತ್ಯವೇದ ಕಾಲೇಜಿನ ಎಲ್ಲಾ ವಿಧ್ಯಾರ್ಥಿಗಳ ಆರೋಗ್ಯಕ್ಕಾಗಿ. |
| ಡಿಸೆಂಬರ್ 09 | : | ಆತನ ಕರೆಯ ಸೇವೆಯ ಸಿಂಧಿ, ಕೊಂಕಣಿ, ಮಣಿಪುರಿ ಪತ್ರಿಕೆಯನ್ನು ಮುದ್ರಿಸುವುದಕ್ಕಾಗಿ. |
| ಡಿಸೆಂಬರ್ 10 | : | ನಮ್ಮ ಸಂಸ್ಥೆಯಲ್ಲಿ ಯೋಗ್ಯವುಳ್ಳ ನೌಕರರು ನೇಮಕ ವಾಗುವಂತೆ. |
| ಡಿಸೆಂಬರ್ 11 | : | ಯೌವ್ವನಸ್ಥ ಮಕ್ಕಳಲ್ಲಿರುವ ಆತ್ಮಹತ್ಯೆಯ ಅತ್ಮವನ್ನು ತೆಗೆಯುವಂತೆ. |
| ಡಿಸೆಂಬರ್ 12 | : | ನಮ್ಮ ಮುಖ್ಯ ಸಭೆ ಮತ್ತು ಶಾಖ ಸಭೆಗಳ ವಿಶ್ವಾಸಿಗಳ ಒಳಿತಿಗಾಗಿ. |
| ಡಿಸೆಂಬರ್ 13 | : | ದೇವರು ಈ ತಿಂಗಳ ಎಲ್ಲಾ ಅಗತ್ಯತೆಗಳನ್ನು ಪೂರೈಸುವುದಕ್ಕಾಗಿ. |
| ಡಿಸೆಂಬರ್ 14 | : | ಆತನ ಕರೆಯ ಸೇವೆಯ ರಾಜ್ಯ ಸಂಯೋಜಕರಿಗಾಗಿ ನಮ್ಮ ಸೇವೆಯ ಎಲ್ಲಾ ಚಟುವಟಿಕೆಗಳಿಗಾಗಿ. |
| ಡಿಸೆಂಬರ್ 15 | : | ನಮ್ಮ ಸೇವೆಯು ವಿಸ್ತರಿಸುವಂತೆ ಮತ್ತು ಪ್ರಪಂಚದ್ಯಾಂತ ಸುವಾರ್ತೆಯು ಸಾರುವಂತೆ. |
| ಡಿಸೆಂಬರ್ 16 | : | ಪ್ರಪಂಚದ್ಯಾಂತ ಎಲ್ಲಾ ಹೆಣ್ಣು ಮಕ್ಕಳ ಮತ್ತು ಮಕ್ಕಳ ಸುರಕ್ಷತೆಗಾಗಿ. |
| ಡಿಸೆಂಬರ್ 17 | : | ನಮ್ಮ ಹಿರಿಯ ಸಭಾ ಪಾಲಕರ ಜೀವನ ಚರಿತ್ರೆಯ ಪುಸ್ತಕವು ಸಫಲವಾಗಿ ಮುಗಿಯಿತು. |
| ಡಿಸೆಂಬರ್ 18 | : | ದೇವರು ನಿರಂತರವಾಗಿ ನಮ್ಮ ಹಿರಿಯ ಸಭಾ ಪಾಲಕರಾದ ಪಾಸ್ಟರ್ ಸ್ಯಾಮ್ ಸೆಲ್ವರಾಜ್ ಮತ್ತು ಅವರ ಕುಟುಂಬವನ್ನು ಕೆಟ್ಟ ಸನ್ನಿವೇಶಗಳಿಂದ ಕರ್ತನು ಸಂರಕ್ಷಿಸುವಂತೆ ಪ್ರಾರ್ಥಿಸಿರಿ. |

(4 ನೇ ಪುಟದಿಂದ)

ಮಾಡುವುದಕ್ಕೆ ಆರಂಭಿಸಿದರು. ಮೋಶೆಯು ನೋಡಿದಾಗ ಅತನಿಗೆ ನಿರಾಶೆ ಮತ್ತು ಕೋಪ ಕೂಡ ಬಂತು. ಆತನು ಆಜ್ಞೆಗಳ ಕಲ್ಲುಗಳನ್ನು ಕೆಳಗೆ ಬೀಸಾಡಿ ಮುರಿದು ಹಾಕಿದನು. ನಾವು ಕೇವಲ ಪರಲೋಕದ ಆಶೀರ್ವಾದ ಮತ್ತು ಆತ್ಮೀಕ ಆಶೀರ್ವಾದಗಳನ್ನು ಪಡೆದುಕೊಳ್ಳುವುದು ಮಾತ್ರವಲ್ಲದೇ, ನಮಗೆ ಭೂಲೋಕ ಆಶೀರ್ವಾದಗಳು ಕೂಡಬೇಕಾಗಿದೆ. ಈ ಆಶೀರ್ವಾದಗಳು ನಮ್ಮ ನೋವನ್ನು ತೆಗೆದು ಹಾಕುತ್ತವೆ. ಮಾನಸಿಕ ಒತ್ತಡ ಮತ್ತು ದುಃಖಗಳನ್ನು ತೆಗೆದು ಹಾಕುತ್ತದೆ. ಇದು ನಾವು ಭೂಲೋಕದ ಆಶೀರ್ವಾದಗಳನ್ನು ಪಡೆದು ಕೊಳ್ಳುವುದಕ್ಕೆ ಸಹಾಯ ಮಾಡುತ್ತದೆ. ಈ ಆಶೀರ್ವಾದವು ಕೂಡ ದೇವರಿಂದ ಬರುತ್ತದೆ. ನಾವು ನಿಶ್ಚಯವಾಗಿ ಭೂಲೋಕದ ಆಶೀರ್ವಾದ ಗಳನ್ನು ಪಡೆದು ಕೊಳ್ಳಬೇಕು. ಈ ಆಶೀರ್ವಾದ ಗಳನ್ನು ನಾವು ನಮ್ಮ ಜನರಿಗೆ, ಮಕ್ಕಳಿಗೆ, ನಮ್ಮ ಕುಟುಂಬಗಳನ್ನು ನಡೆಸುವುದಕ್ಕೆ ಉಪಯೋಗಿಸ ಬಹುದು. ಅನೇಕ ಕುಟುಂಬಗಳು ಈ ಆಶೀರ್ವಾದ ಗಳನ್ನು ಪಡೆದುಕೊಳ್ಳದೇ ದೊಡ್ಡ ಸಮಸ್ಯೆಗಳಲ್ಲಿ ಸಿಲುಕಿಕೊಂಡಿದ್ದಾರೆ. ಕೇವಲ ಪರಲೋಕದ ಆಶೀರ್ವಾದಗಳು ಮಾತ್ರ ಸಾಕು ಎಂದು ಅನೇಕ ಜನರು ಭೂಲೋಕದ ಆಶೀರ್ವಾದಗಳನ್ನು ತಿರಸ್ಕಾರ ಮಾಡುತ್ತಾರೆ, ದೇವರು ಅವರಿಗೆ ಕೊಟ್ಟದ್ದನ್ನು ಮುರಿದು ಹಾಕುತ್ತಾರೆ. ಆದ್ದರಿಂದ ಅವರು ದುಃಖದಲ್ಲಿ ಜೀವಿಸುತ್ತಾರೆ.

ಯೋಬನು ಕೇವಲ ಒಂದೇ ದಿನದಲ್ಲಿ ಭೂಲೋಕದ ಆಶೀರ್ವಾದಗಳನ್ನು ಕಳೆದು ಕೊಂಡನು. ಅವನು 7000 ಕುರಿಗಳು, 3000 ಒಂಟೆಗಳು, 500 ಎತ್ತುಗಳು, 500 ಹೆಣ್ಣು ಕತ್ತೆಗಳು, ತನ್ನ ಮಕ್ಕಳನ್ನು, ಹೆಣ್ಣು ಮಕ್ಕಳನ್ನು, ಸೇವಕರನ್ನು ಅದೇ ದಿನದಲ್ಲಿ ಕಳೆದುಕೊಂಡನು. ತಾನು ಕಳೆದುಕೊಂಡದನ್ನು ಕರ್ತನಾದ ದೇವರು ತನಗೆ ಎರಡರಷ್ಟು ಕೊಡುತ್ತಾನೆಂದು ಯೋಬನಿಗೆ ಗೊತ್ತಿತ್ತು. ಆತನು ಅವನನ್ನು ಎಂದಿಗೂ ಕೈ ಬಿಡುವುದಿಲ್ಲವೆಂದು ವಿಶ್ವಾಸವಿಟ್ಟಿದ್ದನು. ಸೈತಾನನು ಕೊಟ್ಟಂತಹ ಶೋಧನೆಗಳಿಂದ ನಾವು ಭೂಲೋಕದ ಆಶೀರ್ವಾದಗಳನ್ನು ಕಳೆದು ಕೊಂಡ್ಯಾಗೂ, ದೇವರು ಎರಡರಷ್ಟು ಕೊಡಲಿಕ್ಕೆ ಶಕ್ತನು. ನಾನು ನಿನ್ನ ಮುಂದೆ ಹೋಗಿ ದಿಣ್ಣೆಗಳನ್ನು ಸಮ ಮಾಡುವೆನು, ತಾಮ್ರದ ಕದಗಳನ್ನು ಒಡೆದು ಕಬ್ಬಿಣದ ಅಗುಳಿಗಳನ್ನು ಮುರಿದು ಬಿಡುವೆನು, ನಿನ್ನ ಹೆಸರು ಹಿಡಿದು ಕರೆಯುವ **ನಾನು ಯೆಹೋವನು, ಇಸ್ರಾಯೇಲ್ಯರ ದೇವರು ಎಂದು ನೀನು ತಿಳಿದುಕೊಳ್ಳುವ ಹಾಗೆ ಕತ್ತಲಲ್ಲಿ ಬಚ್ಚಿಟ್ಟಿರುವ ಆಸ್ತಿಪಾಸ್ತಿಯನ್ನು ಗುಪ್ತ ಸ್ಥಳಗಳಲ್ಲಿ ಮರೆ ಮಾಡಿದ ನಿಧಿ ನಿಕ್ಷೇಪವನ್ನೂ ನಿನಗೆ ಕೊಡುವೆನು. ನನ್ನ ಸೇವಕನಾದ ಯಾಕೋಬಿಗಾಗಿ, ನಾನು ಅಂದುಕೊಂಡ ಇಸ್ರಾಯೇಲಿಗಾಗಿ ಹೆಸರು ಹಿಡಿದು ನಿನ್ನನ್ನು ಕರೆದಿದ್ದೇನೆ; ನೀನು ನನ್ನನ್ನು ಅರಿಯದವ ನಾಗಿದ್ದರೂ ನಿನಗೆ ಬಿರುದನ್ನು ದಯ ಪಾಲಿಸಿದ್ದೇನೆ.** ಯೆಶಾಯ 45:2-4.

ಯೆಹೋವನು ಮೋಶೆಗೆ - ನೀನು ಮೊದಲಿನ ಕಲ್ಲಿನ ಹಲಿಗೆಗಳಂತೆ ಇನ್ನು ಎರಡು ಕಲ್ಲಿನ ಹಲಿಗೆಗಳನ್ನು ಸಿದ್ಧಪಡಿಸಿಕೋ. ನೀನು ಒಡೆದುಬಿಟ್ಟ ಆ ಮೊದಲನೆಯ ಹಲಿಗೆಗಳ ಮೇಲಿದ್ದ ವಾಕ್ಯಗಳನ್ನು ನಾನು ಈ ಹಲಿಗೆಗಳ ಮೇಲೆ ಬರೆಯುವೆನು. ವಿಮೋಚನಕಾಂಡ 34:1.

ನೀವು ದೇವರ ವಾಗ್ದಾನವನ್ನು ಅಥವಾ ಐಹಿಕ ಆಶೀರ್ವಾದವನ್ನು ಮುರಿದಿದ್ದರೆ, ದಯಮಾಡಿ ಅರ್ಥಮಾಡಿಕೊಳ್ಳಿ ದೇವರು ನಿಮಗೆ ಆತನು ತಿರುಗಿಕೊಡುವುದಕ್ಕೆ ಸಿದ್ಧನಾಗಿದ್ದಾನೆ. ನಂಬಿಕೆಯಿಂದ ಕಾರ್ಯ ಮಾಡಿರಿ. ದೇವರು ನಿಶ್ಚಯವಾಗಿ ನಿಮ್ಮ ಅಗತ್ಯತೆಗಳನ್ನು ಪೂರೈಸುವನು.

## 3. ಎದೆಯ ಆಶೀರ್ವಾದಗಳು !

ಸ್ತನದ ಆಶೀರ್ವಾದಗಳು ಮಕ್ಕಳನ್ನು ಬೆಳೆಸಿದ ತಾಯಿಯನ್ನು ಸೂಚಿಸುತ್ತದೆ. ಯೋಸೆಫನು ಸ್ತನಗಳ ಮತ್ತು ಗರ್ಭಾಶಯದ ಆಶೀರ್ವಾದವನ್ನು ಪಡೆದನು. 2 ಅರಸುಗಳು 4:8 ರಲ್ಲಿ ಹೀಗೆ ಓದುತ್ತೇವೆ. ಸೂನೈಮದ ಸ್ತ್ರೀಯನ್ನು ನೋಡುತ್ತೇವೆ. ಆಕೆಯು ಬಹಳ ಮಾರ್ಯದೆಸ್ತವಳು ಆಗಿದ್ದಳು. ಆಕೆಗೆ ದೇವರ ಸೇವಕರುಗಳ ಸೇವೆ ಮಾಡುವ ಅಭ್ಯಾಸವಿತ್ತು. ಅವಳು ಮೇಲಿನ ಕೋಣೆಯನ್ನು ನಿರ್ಮಿಸಿ ಸೇವಕರನ್ನು ಅಲ್ಲಿಯೇ ಇರುವಂತೆ ಮಾಡಿದಳು. ಆಕೆಯ ಅವರ ಎಲ್ಲಾ ಅಗತ್ಯತೆಗಳನ್ನು ಪೂರೈಸಿದಳು. **ನಮಗೆ ಇಷ್ಟೆಲ್ಲಾ ಉಪಕಾರ ಮಾಡಿದಿ; ನಾನು ನಿನಗೆ ಯಾವ ಪ್ರತ್ಯುಪಕಾರ ಮಾಡಲಿ?** 2 ಅರಸುಗಳು 4:13 ರಲ್ಲಿ



ಎಲಿಷನು ಕೇಳಿದನು. ಇದರಿಂದ ನಮಗೆ ಅರ್ಥವಾಗುತ್ತದೆ ಆಕೆಯು ದೇವರ ಸೇವಕರನ್ನು ಬಹಳ ಚೆನ್ನಾಗಿ ನೋಡಿಕೊಂಡಳು. ಯೇಸು ಕ್ರಿಸ್ತನು ತನ್ನ ಶಿಷ್ಯರಿಗೆ ಹೀಗೆ ಹೇಳಿದನು. **ನೀವು ಕ್ರಿಸ್ತನವರೆಂದು ನಿಮಗೆ ಯಾವನಾದರೂ ಒಂದು ತಂಬಿಗೆ ನೀರನ್ನು ಕುಡಿಯುವುದಕ್ಕೆ ಕೊಟ್ಟರೆ ಬರತಕ್ಕ ಪ್ರತಿಫಲವು ಅವನಿಗೆ ತಪ್ಪುವುದೇ ಇಲ್ಲೆಂದು ನಿಮಗೆ ಸತ್ಯವಾಗಿ ಹೇಳುತ್ತಾನೆ** (ಮಾರ್ಕ 9:41). ದೇವರ ಸೇವಕರುಗಳಿಗೆ ನಾವು ಏನನ್ನು ಸಲ್ಲಿಸುತ್ತೇವೆ ಪರಲೋಕವು ಗುರುತಿಸುತ್ತದೆ. ದೇವರ ಸೇವಕರುಗಳು ಯಾರು? ನಿಮ್ಮ ಆತ್ಮ ಮತ್ತು ದೇಹದ ಒಳಿತಗಾಗಿ ಹೋರಾಡುವವರು. ನೀವು ನಿಮ್ಮ ಜೀವಿತದಲ್ಲಿ ಸಫಲರಾಗಬೇಕೆಂದು ಪ್ರಾರ್ಥಿಸುತ್ತಾರೆ. ನಿಮ್ಮ ಬಗ್ಗೆ ಅವರು ಪರಲೋಕದಲ್ಲಿ ವರದಿಯನ್ನು ಕೊಡುತ್ತಾರೆ. ಯೆಹೋವನು ನನಗೆ ಕುರುಬನು ಕೊರತೆ ಪಡೆನು. ಕೀರ್ತನೆ 23:1. ಕುರುಬನ ಕೈಯಲ್ಲಿರುವ ಕೋಲು ಮೃದು ಎಲೆಗಳನ್ನು ಕೆಳಗೆ ಬೀಳಿಸಿ ಕುರಿಗಳು

NEHEMIAH BIBLE
EVENING COLLEGE

Chepauk & Santhoshapuram, Chennai.

Medium : Tamil

Registered Candidate for Membership
Asia Theological Association (ATA)
Recognised by International Christian Leaders &
Senior Pastors for the past 53 years

Certificate in Theology : One year
Diploma in Theology : Two years

Qualification : 10th Standard & above
Rush for Admission!

Contact : The Chairman, Nehemiah Bible College.
10, MOHAMMED ABDULLAH 2ND STREET, BELLS ROAD, CHEPAUK, CHENNAI - 600 005, INDIA.
Phone : (+91-44) 2852 8282, Cell : (+91) 98410 71852 / 95661 31858
E.mail : sam@echoofhiscall.org / Website : www.echoofhiscall.org

ಮೇಯಿವುದಕ್ಕೆ ಸಹಾಯ ಮಾಡುತ್ತದೆ. ನೆಲದ ಮೇಲೆ ಇರುವ ಹುಲ್ಲನ್ನು ಕುರಿಗಳು ಮೇಯಿದ ಮೇಲೆ, ಕುರುಬನ ಕೋಲು ಮರದ ಎಲೆಗಳನ್ನು ಬೀಳಿಸುವುದಕ್ಕೆ ಸಹಾಯ ಮಾಡುತ್ತದೆ. ಇದು ಸ್ತನಗಳ ಆಶೀರ್ವಾದವಾಗಿದೆ. ತಾಯಿಯು ತನ್ನ ಮಕ್ಕಳಿಗೆ ಎದೆಯ ಹಾಲನ್ನು ಉಣಿಸಿದ ಹಾಗೆ, ದೇವರ ಸೇವಕರುಗಳು ಕರ್ತನ ಆಶೀರ್ವಾದಗಳನ್ನು ತರುತ್ತಾರೆ ಮತ್ತು ಜನರಿಗೆ ಕಳುಹಿಸುತ್ತಾರೆ. ಆದ್ದರಿಂದ ದೇವರ ಸೇವಕರುಗಳಿಂದ ಸ್ತನಗಳ ಆಶೀರ್ವಾದವನ್ನು ನಾವು ಸ್ವೀಕರಿಸಲೇಬೇಕು.

**ಹನ್ನಳಗೆ ಮಕ್ಕಳಿರಲಿಲ್ಲ, ಕಾರಣ ದೇವರು ಆಕೆಯ ಗರ್ಭವನ್ನು ಮುಚ್ಚಿದ್ದನು.** 1 ಸಮುವೇಲ 1:2,6 **ಈ ವಾಕ್ಯವು ಹೇಳುತ್ತದೆ ದೇವರು ತಾನೆ ಆಕೆಯ ಗರ್ಭವನ್ನು ಮುಚ್ಚಿದ್ದನು ಎಂದು.** ಆಕೆಯು ದೇವರಿಗೆ ನೀನು ನನಗೆ ಗಂಡು ಮಗುವನ್ನು ಕೊಟ್ಟರೆ, ಅವನನ್ನು ನಿನ್ನ ಸೇವೆಗೆ ಜೀವತ ಕಾಲವೆಲ್ಲಾ ಕೊಡುತ್ತೇನೆಂದು ಪ್ರಾರ್ಥನೆ ಮಾಡಿ ಅರಿಕೆ ಮಾಡಿಕೊಂಡಳು.

1. **ಮಗುವನ್ನು ಗರ್ಭ ಧರಿಸುವುದು ಅರ್ಥ ದೇವರ ದರ್ಶನವನ್ನು ಸ್ವೀಕರಿಸುವುದು.** ಕೇವಲ ಇದು ಮಾತ್ರ ಪ್ರಾಮುಖ್ಯವಲ್ಲ.
2. **ಮಗು ಹುಟ್ಟಲೇಬೇಕು.** ಇದರ ಅರ್ಥ ನಾವು ಕರ್ತನ ದರ್ಶನವನ್ನು ಪಡೆಯುವ ಮೂಲಕ ಫಲಿತಾಂಶವನ್ನು ಹೊಂದಬೇಕು.
3. **ನೀವು ಮಗುವನ್ನು ಬೆಳೆಸಬೇಕು.** ಕರ್ತನ ದರ್ಶನವನ್ನು ಪಡೆದುಕೊಂಡ ಮೇಲೆ, ನೀವು ದರ್ಶವನ್ನು ಹೆಚ್ಚಿಸಬೇಕು ಮತ್ತು ಬಹಳ ಎಚ್ಚರಿಕೆಯಿಂದ ಕಾರ್ಯರೂಪಕ್ಕೆ ತರಬೇಕು.

ದೇವರ ಸೇವಕರು ತಮ್ಮ ನವಜಾತ ಶಿಶುವನ್ನು ಕಸದ ಬುಟ್ಟಿಗೆ ಎಸೆಯುವ ಕೆಲವು ತಾಯಂದಿರಂತೆ ಇರಬಾರದು. ಸುವಾರ್ತೆಯನ್ನು ಸಾರುವುದರ ಮೂಲಕ ನಾವು ಜನರಲ್ಲಿ ದರ್ಶನವನ್ನು ಸೃಷ್ಟಿ ಮಾಡುತ್ತೇವೆ. ಆದರೆ ಅವರು ಪಡೆದುಕೊಂಡ ತಕ್ಷಣ, ನಾವು ಅವರನ್ನು ಏಕಾಂಗಿಯಾಗಿ ಬಿಡಬಾರದು. ನಾವು ಅವರನ್ನು ಆತ್ಮಗಳನ್ನು ಆತ್ಮದಲ್ಲಿ, ವಾಕ್ಯ ಮತ್ತು ಸತ್ಯದಲ್ಲಿ ಬೆಳೆಸಬೇಕು. ಆದಿಕಾಂಡ 21:8ರಲ್ಲಿ ಅಬ್ರಹಾಮನ ಮಗು ಬೆಳೆಯಿತು ಮತ್ತು ಹಾಲುಣಿಸಿತು. ಅಬ್ರಹಾಮನು ದೊಡ್ಡ ಔತಣವನ್ನು ಕೊಟ್ಟನು. ಸಭೆಯಲ್ಲಿ ವ್ಯಕ್ತಿಯು ದರ್ಶನವನ್ನು ಪಡೆದುಕೊಂಡ ಮೇಲೆ, ದೇವರ ಸೇವಕರು ಅವನು ಅತ್ಮೀಕ ಸತ್ಯವನ್ನು ಮತ್ತು ಬೆಳೆಯುವುದಕ್ಕೆ ನಡೆಸಬೇಕು. ತಾಯಿಯು ಮಗುವಿಗೆ ಹಾಲುಣಿಸದ ಹಾಗೆ ಮಗುವು ಬೆಳೆಯುತ್ತದೆ. ಸ್ತನಗಳ ಆಶೀರ್ವಾದವನ್ನು ಪಡೆದುಕೊಂಡ ದೇವರ ಸೇವಕರುಗಳು ಪವಿತ್ರಾತ್ಮನ ಶಕ್ತಿಯಲ್ಲಿ ನಿಂತು ಕೊಳ್ಳಬೇಕು. ಸಭೆಯ ಜನರಿಗೆ ಕಳುಹಿಸಿ ಮತ್ತು ಅವರು ಬೆಳೆಯುವುದಕ್ಕೆ ಸಹಾಯ ಮಾಡಬೇಕು. ದೇವರ ಸಭೆಯು ಬಲವಾಗಿ ಕಟ್ಟಬೇಕು. **ಪಾತಾಳ ಲೋಕದ ಬಲವು ಅದನ್ನು ಸೋಲಿಸಲಾರದು.** ಮತ್ತಾಯ (16:18). **ದೇವರ ಮಕ್ಕಳು ದೇವರ ಸಭೆಯಲ್ಲಿ ಹುಟ್ಟಬೇಕು. ಯೆಹೋವನ ಆಲಯದಲ್ಲಿ ಸಸಿಗಳಂತೆ ನೆಡಲ್ಪಟ್ಟವರು, ನಮ್ಮ ದೇವರ ಅಂಗಳದಲ್ಲಿ ಚೆನ್ನಾಗಿ ಬೆಳೆಯುವರು** (ಕೀರ್ತನೆ 92:13).

## 4. ಗರ್ಭದ ಆಶೀರ್ವಾದಗಳು!

**ಎಲೀಷನು ಆ ಮನೆಯನ್ನು ಮುಟ್ಟಿದಾಗ ಸತ್ತ ಹುಡುಗನು ತನ್ನ ಮಂಚದ ಮೇಲೆ ಇಡಲ್ಪಟ್ಟಿರುವುದನ್ನು ಕಂಡು ಯಾರೂ ಒಳಗೆ ಬಾರದಂತೆ ಆ ಕೋಣೆಯ ಬಾಗಿಲನ್ನು ಮುಚ್ಚಿಕೊಂಡು ಯೆಹೋವನನ್ನು ಪ್ರಾರ್ಥಿಸಿದನು. ಅನಂತರ ಹುಡುಗನ ಮೇಲೆ ಬೋರ್ಲ ಬಿದ್ದು ತನ್ನ ಬಾಯಿ ಕಣ್ಣು ಕೈಗಳನ್ನು ಅವನ ಬಾಯಿ ಕಣ್ಣು ಕೈಗಳಿಗೆ ಮುಟ್ಟಿಸಿದ್ದರಿಂದ ಹುಡುಗನ ದೇಹವು ಬೆಚ್ಚಗಾಯಿತು. ಆ ಮೇಲೆ ಹುಡುಗನನ್ನು ಬಿಟ್ಟು ಎದ್ದು ಮನೆಯಲ್ಲಿ ತುದು ಹೊತ್ತು ಅತ್ತಿತ್ತ ಅಡ್ಡಾಡಿ ತಿರಿಗಿ ಅವನ ಮೇಲೆ ಬೋರ್ಲ ಬೀಳಲು ಹುಡುಗನು ಏಳು ಸಾರಿ ಸೀತು ಕಣ್ಣೆರೆದನು** (2 ಅರಸುಗಳು 4:32-35).

ಇದು ಕೂಡ ದೇವರ ಸೇವಕರ ಮೂಲಕ ಆಶೀರ್ವಾದಗಳನ್ನು ಪಡೆದುಕೊಂಡಿರುವುದಾಗಿದೆ. ಯಾವ ರೀತಿಯಾಗಿ ತಾಯಿಯು ಬಹಳ ನೋವಿನಿಂದ ಮಗುವಿಗೆ ಜನ್ಮ ನೀಡಿದ ಹಾಗೆ. ದೇವರ ಸೇವಕರುಗಳು ದೇವರ ಶಕ್ತಿಯನ್ನು ಸ್ವೀಕರಿಸಿಕೊಂಡು ಮತ್ತು ಸುವಾರ್ತೆಯನ್ನು ಜನರಿಗೆ ಸಾರುವುದರಿಂದ ಕ್ರಿಯೆ ಮಾಡುತ್ತಾರೆ. ಬೆಳೆಯುವುದಕ್ಕೆ ಸಹಾಯ ಮಾಡುತ್ತಾರೆ. ಬೇರೆಯವರನ್ನು ಸಭೆಗೆ ಕರೆದುಕೊಂಡು ಬರುವುದಕ್ಕೆ ಪ್ರೋತ್ಸಾಹ ಮಾಡುತ್ತಾರೆ ಮತ್ತು ಇನ್ನೂ ಅನೇಕ ಸಭೆಗಳನ್ನು ಕಟ್ಟುವುದಕ್ಕಾಗಿ. ಇದರಲ್ಲಿ ದೇವರ ಸೇವಕರುಗಳ ಪಾತ್ರವು ಬಹಳ ಪ್ರಾಮುಖ್ಯವಾಗಿದೆ. ಅವರು ದೇವರಿಂದ ಸ್ವೀಕರಿಸುವ ಯಾವುದೇ ಆಜ್ಞೆಯನ್ನು ಜನರಿಗೆ ಮತ್ತು ಸಭೆಗೆ ತಪ್ಪದೆ ನೇರವೇರಿಸಬೇಕು. ಅವರು ದೇವರ ಆಜ್ಞೆಗಳನ್ನು ಸಂರಕ್ಷಿಸಬೇಕು.

*(9ನೇ ಪುಟಕ್ಕೆ)*


## Echo of His Call Postal Courses for candidates in India only

### 1. BIBLECOR

We offer Postal Course on Basic Truths of The Bible to new Christians and non-Christians in English – 57 pages, Hindi – 76 pages & Tamil – 96 pages. You will get a course book entitled New Life – For You! **After the completion of this course, you will get a certificate. There will be no compulsory fees. You will be blessed!**

### 2. THEOLOGICAL CORRESPONDENCE COURSE

Advanced Distance Education called **Theological Correspondence Course** is available in English – 537 pages and Tamil – 652 pages for Pastors, Evangelists, Christian Leaders and for lay people who have passion to do God's Ministry! A fee of Rs. 1000/- is charged. 7 Books with 149 Chapters are supplied. **Certificate in Ministry** will be awarded. **God will bless you!**

***For more details, write to us.***

**The Chairman, Nehemiah Bible College,**
**Echo of His Call,** Post Box 2957
CHEPAUK, CHENNAI - 600 005.
**Ph.: (044) 2852 8282, 2852 9293, 2854 7766,**
**Cell : 98410 71852, 95661 31858**
**E.mail : biblecor@yahoo.co.in**

## TAX EXEMPTION

Donations by any individual or organization from India to **Echo of His Call Educational Trust** are eligible for Income Tax exemption under Section 80G of the Income Tax Act. Official receipts will be issued for this purpose. Please make your Demand Drafts / Cheques / M.O. for such donations in favour of **Echo of His Call Educational Trust** and send to us, along with your Aadhar Number and PAN for getting Income Tax Exemption.

| | | |
|---|---|---|
| **Account Name** | : | **ECHO OF HIS CALL EDUCATIONAL TRUST** |
| **Account Number** | : | **1023 2923 805** |
| **Bank Name** | : | **STATE BANK OF INDIA** |
| **Branch** | : | **TRIPLICANE, CHENNAI - 600 005** |
| **IFSC Code** | : | **SBIN 0000249** |
| **SWIFT Code** | : | **SBI NIN BB 455** |



# ಹಳ್ಳದಿಂದ ಅರಮನೆಗೆ

# PIT TO PALACE

(ಪಾಸ್ಟರ್ ಎಸ್. ಸ್ಯಾಮ್ ಸೆಲ್ವರಾಜ್‌ರವರ ಜೀವನದ ಅನುಭವಗಳು)

"ಯಾರು ಓದುತ್ತಾರೋ ಅವರೇ ಅರ್ಥವಾಗಲಿ" (ಮತ್ತಾಯ 24:15)

## ದೇವರು ನನಗೆ ಸಾಕು! GOD IS SUFFICIENT!

***...ಯೆಹೋವನ ಸನ್ನಿಧಿಯಲ್ಲಿ ಬೇಡಿಕೊಳ್ಳುವವರಿಗೆ ಯಾವ ಮೇಲಿಗೂ ಕಡಿಮೆಯಿಲ್ಲ*** (ಕೀರ್ತನೆ 34:10).

1969 ರಿಂದ ನಾವು ಪ್ರಾರಂಭಿಸಿದ ಆತನ **ಕರೆಯ ಪ್ರತಿಧ್ವನಿ** ಸೇವೆಯು, ನಮ್ಮ ಬಹು ವಿಧದ ಸೇವೆಗಳಿಗೆ ಆರ್ಥಿಕ ಸಹಾಯವು ನಮಗೆ ಅಗತ್ಯವಿತ್ತು. ನಮ್ಮ ಕೆಲಸಗಾರರಿಗೆ ಸಂಬಳ, ಮುದ್ರಣಾಲಯಕ್ಕೆ ಹಾಳೆಗಳು, ದೂರವಾಣಿ ಖರ್ಚುಗಳು, ವಿದ್ಯುಚ್ಛಕ್ತಿಯ ಖರ್ಚುಗಳು, ಕಟ್ಟಡಗಳ ಬಾಡಿಗೆ, ಸಾರಿಗೆ ವೆಚ್ಚ, ದಾನ ಧರ್ಮ ಇನ್ನೂ ಮುಂತಾದವುಗಳಿಗೆ ಕೊಡುವುದಕ್ಕೆ ನಮಗೆ ಹಣದ ಅವಶ್ಯಕತೆ ಇತ್ತು.

ವೈಯಕ್ತಿಕವಾಗಿ ಹೇಳುವುದಾದರೆ ನಮ್ಮ ಕರ್ತನಾದ ಯೇಸು ಕ್ರಿಸ್ತನು ನನಗೆ ಸಾಕು. ನಾನು ಯಾರು ಬಾಗಿಲನ್ನು ತಟ್ಟಿಲ್ಲಿ ಅಥವಾ ಯಾವುದೇ ಕಛೇರಿಗೆ ಹಣವನ್ನು ಅಪೇಕ್ಷೆ ಇಟ್ಟುಕೊಂಡು ಇದುವರೆಗೆ ಹೋಗಲಿಲ್ಲ. ನಮ್ಮ ಸಭೆಯ ಸದಸ್ಯರುಗಳ ಮನೆಗೆ ಅಥವಾ ಸ್ನೇಹಿತರ ಬಳಿಗೆ ಹಣದ ಸಹಾಯಕ್ಕಾಗಿ ಹೋಗುವ ಅಭ್ಯಾಸವು ಕೂಡ ನನಗೆ ಇಲ್ಲ. ಆದರೆ ಇಲ್ಲಿಯವರೆಗೆ, ನನ್ನನ್ನು ಕರೆದ ಕರ್ತನು ನನ್ನ ಎಲ್ಲಾ ಅಗತ್ಯಗಳನ್ನು ಅಧ್ಭುತವಾಗಿ ಪೂರೈಸಿದ್ದಾನೆ.

**ಒಂದೊಂದು ವಸ್ತುವನ್ನು ಸಮಯಕ್ಕೆ ತಕ್ಕ ಹಾಗೆ ಅಂದವಾಗಿ ನಿರ್ಮಿಸಿದ್ದಾನೆ.** ಪ್ರಸಂಗಿ 3:11)

ಅಗತ್ಯತೆಗಳ ಮತ್ತು ಸಂಕಷ್ಟಗಳ ಸಮಯುಗಳಲ್ಲಿ, ಅಂತಹ ಸಂದರ್ಭಗಳನ್ನು ಸಹಿಸಿಕೊಳ್ಳುವ ಸಮಯ ನೋಡುವುದನ್ನು ನಾನು ಆಭ್ಯಾಸ ಮಾಡಿಕೊಂಡಿದ್ದೇನೆ. ದೇವರು ನನಗೆ ಪ್ರಾರ್ಥನೆ ಮಾಡು ಎಂದು ಒತ್ತಾಯಿಸಿದಾಗ, ಪ್ರಾರ್ಥನೆಯಲ್ಲಿ ದೇವರೊಂದಿಗೆ ನನ್ನ ಉತ್ತಮ ಸಂಬಂಧ. ಈ ಅನುಭವಗಳ ನಂತರ ನಾನು ದೊಡ್ಡ ಅದ್ಭುತ ಕಾರ್ಯವನ್ನು ಸಂತೋಷಿಸಿದೆ. ಇಂತಹ ಸಂದರ್ಭಗಳಲ್ಲಿ, ದೇವರು ಅನೇಕ ಜನರನ್ನು ಎಬ್ಬಿಸಿದನು. ಗೊತ್ತಿಲ್ಲದ ಜನರು ಸಹಾಯ ಮಾಡಿದರು. ಅನೇಕ ಸಮಯಗಳಲ್ಲಿ ದೇವರು ನನಗೆ ಮತ್ತು ನನ್ನ ಕುಟುಂಬಕ್ಕೆ ಗೊತ್ತಿಲ್ಲದ ಜನರ ಮೂಲಕ ಉಣಬಡಿಸಿದನು!

1975 ರಲ್ಲಿ ಆತನ **ಕರೆಯ ಪ್ರತಿಧ್ವನಿ**ಯ ಸೇವೆಯ ಪತ್ರಿಕೆಯನ್ನು ಮುದ್ರಿಸಿದ್ದೇವು. ಬಾಪೂಜಿ ಪ್ರೆಸ್‌ಗೆ 300 ರೂಪಾಯಿಯುನ್ನು ಕೊಡಬೇಕಾಗಿತ್ತು. ನನ್ನ ಕೈಯಲ್ಲಿ ಹಣವಿಲ್ಲದಿದ್ದರಿಂದ ಆ ಹಣವನ್ನು ಕೊಡುವುದಕ್ಕೆ ಸ್ವಲ್ಪ ನನಗೆ ತಡವಾಯಿತು. ಒಂದು ಪ್ರತ್ಯೇಕ ಗುರವಾರ, ಆ ಮುದ್ರಣಾಲಯದ ಮ್ಯಾನೇಜರ್‌ಗೆ ನಾನು ಮುಂದಿನ ಸೋಮವಾರ ಕೊಡುತ್ತೇನೆ ಎಂದು ಹೇಳಿದೆನು. ಆದರೆ ನನಗೆ ಆ ಹಣದ ಮೂಲ ಎಲ್ಲಿ ಅಂತ ಗೊತ್ತಿರಲಿಲ್ಲ. ಒಂದು ವೇಳೆ ಹಣವನ್ನು ಕೊಡಲು ಸೋತರೆ, ಆ ತಿಂಗಳು ಆತನ ಕರೆಯ ಪ್ರತಿಧ್ವನಿ ಸೇವೆಯ ಪತ್ರಿಕೆಯನ್ನು ಪ್ರಕಟಿಸಲು ನನಗೆ ಸಾಧ್ಯವಾಗಲಿಲ್ಲ ಮತ್ತು ಸರ್ಕಾರದಿಂದ ಆನೇಕ ಪರಿಣಾಮಗಳನ್ನು ಎದುರಿಸಲು ನನಗೆ ತುಂಬಾ ತೊಂದರೆಯಾಗುತ್ತಿತ್ತು. ನನ್ನ ಅಗತ್ಯತೆಗೋಸ್ಕರ ದೇವರ ಹತ್ತಿರ ಪ್ರಾರ್ಥನೆ ಮಾಡಿ ನಿಶ್ಚಿಂತನಾದೆನು. ಭಾನುವಾರದವರೆಗೆ ನನಗೆ ಬೇಕಾದ ಹಣವು ನನಗೆ ದೊರಯಲಿಲ್ಲ.

ಸೋಮವಾರ ಮುಂಜಾನೆ, ಅಂಚೆ ಕಛೇರಿಯಲ್ಲಿ ನನ್ನ ಅಂಚೆ ಪೆಟ್ಟಿಗೆಯನ್ನು ತೆರೆದಾಗ, ದಕ್ಷಿಣ ಭಾರತದ ಮಧುರೈ ಮತ್ತು ತುತಕೋರಿನ್ ನಡುವೆ ಇರುವ ಒಂದು ಸಣ್ಣ ಹಳ್ಳಿಯಾದ ನಾಗಲಾಪುರಂನಿಂದ ಒಂದು ಲಕೋಟೆಯನ್ನು ನಾನು ಕಂಡುಕೊಂಡೆ. ಆ ಒಂದು ಲಕೋಟೆಯಲ್ಲಿ 300 ರೂಪಾಯಿಯು ಇತ್ತು. ಅ ಹೊತ್ತಿನ ದಿನಕ್ಕೆ ಬೇಕಾದ ಹಣವು ನನಗೆ ಇತ್ತು. ನಾನು ವಾಗ್ದಾನ ಮಾಡಿದ ಹಾಗೆ ಆ ಮುದ್ರಣದ ಹಣವನ್ನು ಕೊಡುವುದಕ್ಕೆ ದೇವರು ನನಗೆ ಸಾಮರ್ಥ್ಯವನ್ನು ಕೊಟ್ಟನು. ದೇವರಿಗೆ ಮಹಿಮೆಯುಂಟಾಗಲಿ!



ಅನೇಕ ದಿನಗಳ ನಂತರ, ನಾಗಲಾಪುರದ ಆ ವ್ಯಕ್ತಿಯನ್ನು ಭೇಟಿ ಯಾಗುವುದಕ್ಕೆ ಹೋದೆನು. ನನಗೆ ಆಶ್ಚರ್ಯ ವಾಯಿತು, ಆ ವ್ಯಕ್ತಿಯು ಒಬ್ಬ ಮೋಚಿ ಯಾಗಿದ್ದನು.

ಆತನು ನನ್ನನ್ನು ನೋಡಿ ಬಹಳ ಸಂತೋಷ ಪಟ್ಟನು. ಅವನು ನನಗೆ ಈ ರೀತಿಯಾಗಿ ಹೇಳಿದನು, ಸರ್ ಆ ನಿರ್ದಿಷ್ಟ ಗುರುವಾರ, ಯಾರೋ ನನ್ನ ಹೃದಯದೊಂದಿಗೆ ಮಾತನಾಡುತ್ತಿದ್ದಾರೆಂದು ನನಗೆ ಅನಿಸಿತು, ಆ ಸಮಯದಲ್ಲಿ ನನ್ನ ಬಳಿ ಇದ್ದ ಏಕೈಕ ಮೊತ್ತವಾದ 300 ನ್ನು ಆತನ **ಕರೆಯ ಪ್ರತಿಧ್ವನಿಯ ಸೇವೆಗೆ** ಕಳುಹಿಸಲು ನನ್ನನ್ನು ಮನವೊಲಿಸಿತು. ಆದ್ದರಿಂದ ನಾನು ಶುಕ್ರವಾರ ನಿಮಗೆ ಕಳುಹಿಸಿದೆ ಅದು ನಿಮಗೆ ಸೋಮವಾರ ಸಿಕ್ಕಿದೆ.

ಆದುದರಿಂದ ಕರ್ತನಾದ ಯೇಸು ಕ್ರಿಸ್ತನು ನನ್ನ ಜೀವಿತದಲ್ಲಿ ಅದ್ಭುತ ಕಾರ್ಯವನ್ನು ಮಾಡಿದನು. ನಮಗೆ ಶಾಶ್ವತ ಹಣದ ಸಹಾಯ ಇಲ್ಲದ್ಯಾಗೂ, ಈ ರೀತಿಯಾಗಿ ಕರ್ತನಾದ ಯೇಸು ಕ್ರಿಸ್ತನು ತಿಳಿಯದ ಜನರ ಮೂಲಕ ನನ್ನ ಅಗತ್ಯತೆಗಳನ್ನು ಪೂರೈಸಿದನು.

ಹೌದು, ಇದು ಬಹಳ ಕಷ್ಟಕರವಾದ ದಾರಿ! ಆದರೂ, ನಾನು ಪ್ರತಿದಿನ ದೇವರ ಮಹಿಮೆಯನ್ನು ವೀಕ್ಷಿಸಲು ಸಮರ್ಥನಾಗಿದ್ದೇನೆ. ಯೆಹೋವನು ನನಗೆ ಕುರುಬನು, ಕೊರತೆ ಪಡೆದನು.

**ಯೆಹೋವನು ನನಗೆ ಕುರುಬನು, ಕೊರತೆ ಪಡೆನು.** ಕೀರ್ತನೆ 23:1.

**ಜ್ಞಾನಿಗಳು ಈ ಸಂಗತಿಗಳನ್ನು ಗಮನಿಸಿ ಯೆಹೋವನು ಕೃಪಾ ಕಾರ್ಯಗಳನ್ನು ಗ್ರಹಿಸಿಕೊಳ್ಳಲಿ.** ಕೀರ್ತನೆ 107:43.

★★★

*(7ನೇ ಪುಟದಿಂದ)*

ಆತನ ಸೇವೆಯನ್ನು ಮಾಡುವುದಕ್ಕೆ ದೇವರ ಕರೆಯುವಿಕೆ ಬಂದಾಗ, ಅದನ್ನು ನಾವು ಸ್ವೀಕರಿಸಲೇಬೇಕು ಮತ್ತು ಹಿಂಜರಿಯಬಾರದು. ಯೇಸು ಕ್ರಿಸ್ತನ ಶಿಷ್ಯನಾದ ತೋಮನು, ಆತನು ಸ್ವಂತಹ ಭಾರತಕ್ಕೆ ಬಂದನು. ಭಾರತ ಯಾವುದೇ ಭಾಷೆ ಮತ್ತು ಸಂಸ□ತಿ ಗೊತ್ತಿಲ್ಲದಿದ್ದರು. ಅವನು ತನ್ನ ನಂಬಿಕೆಯ ಮೂಲಕ ದೇವರ ಶಕ್ತಿಯನ್ನು ಪ್ರಕಟಿಸಿದನು. ಆತನ ಸಮರ್ಪಣೆಯ ಸೇವೆಯಿಂದ, ದೇವರ ಮಹಿಮೆಯು ಪ್ರಕಟವಾಯಿತು. ಜನರು ಗುಂಪಾಗಿ ಪಶ್ಚಾತ್ತಾಪ ಪಟ್ಟರು. ಒಂದು ಕಡೆಗೆ 30 ಲಕ್ಷ ಜನರು ಪಶ್ಚಾತ್ತಾಪ ಪಟ್ಟರು ಒಂದು ಕಡೆಗೆ ದಾಖಲೆಯಾಗಿದೆ. ಅದರಲ್ಲಿ 7 ಲಕ್ಷ ಜನರು ದೇವರ ಕೃಪೆಯಿಂದ ದೇವರ ಸೇವೆಯಲ್ಲಿ ಇದ್ದರು. ಒಂದು ವೇಳೆ ಈ ಜನರು ಸರಿಯಾಗಿ ಸೇವೆ ಮಾಡಿದರೆ, ಎಷ್ಟು ಜನರು ಪಶ್ಚಾತ್ತಾಪ ಪಡುತ್ತಾರೆ ಮತ್ತು ದೇವರ ಮಕ್ಕಳಾಗುತ್ತಾರೆ ಎಂದು ನಾವು ಊಹಿಸಬಹುದು. ಇದನ್ನು ಸಾಧಿಸಬೇಕೆಂದರೆ ನಮಗೆ ಗರ್ಭದ ಆಶೀರ್ವಾದಗಳು ಬೇಕಾಗಿವೆ. ತಾಯಿಯು ಮಗುವನ್ನು ನೋವುನಿಂದ ಜನ್ಮ ಕೊಟ್ಟ ಹಾಗೆ. ನಾವು ಅತನ ಸೇವೆಗೆ ನಮ್ಮ ಕರೆಯಲ್ಲಿ ಪ್ರಾಮಾಣಿಕ ಮತ್ತು ಸಮರ್ಪಿತವಾಗಿದ್ದರೆ ಮಾತ್ರ ನಾವು ಜನರನ್ನು ಪಶ್ಚಾತ್ತಾಪ ಪಡುವಂತೆ ಮಾಡಬಹುದು.

2. ಅರಸುಗಳು 4:18 ಕೊಂಯ್ಯುವವರೊಂದಿಗೆ ಇದ್ದ ತನ್ನ ತಂದೆಯ ಬಳಿಗೆ ಹೋಗುವ ಮಗನ ಬಗ್ಗೆ ಮಾತನಾಡುತ್ತದೆ. ಮಗು ಬೆಳೆದು ತಂದೆಗೆ ಸೇವೆ ಮಾಡಬೇಕು. ಅದೇ ರೀತಿಯಾಗಿ, ಸಭೆಯು ಅಥವಾ ದೇವರ ಸೇವಕರುಗಳು ಅಥವಾ ಸಭೆಯ ಸದಸ್ಯರು ಬೆಳೆದು ಅವರು ಬೇರೆಯವರೆಗೆ ಸೇವೆ ಮಾಡಬೇಕು. ಅಲ್ಲಿದ್ದಾಗ ಅವನು ಫಕ್ಕನೆ - **ಅಪ್ಪಾ, ನನ್ನ ತಲೆ, ನನ್ನ ತಲೆ ಎಂದು ಕೂಗಲು ತಂದೆಯು ಒಬ್ಬ ಸೇವಕನನ್ನು ಕರೆದು ಅವನಿಗೆ – ಇವನನ್ನು ತಾಯಿಯ ಹತ್ತಿರ ತೆಗೆದುಕೊಂಡು ಹೋಗು ಎಂದು ಆಜ್ಞಾಪಿಸಿದನು** (2 ಅರಸುಗಳು 4:19). ಮಗುವು ಅಸ್ವಸ್ಥನಾದಗ ದೇವರ ಸೇವಕರುಗಳು ಮತ್ತು ವಿಶ್ವಾಸಿಗಳು ತಮ್ಮ ಪ್ರಾರ್ಥನೆಯ ಜೀವಿತದಲ್ಲಿ ಸಮಸ್ಯೆಗಳನ್ನು ಎದುರಿಸುತ್ತಾರೆ, ಸೇವೆಯು ಮತ್ತು ಸಭೆಗೆ ಬರುವುದು. ಇಂತಹ ಸಮಸ್ಯೆಗಳನ್ನು ನಾವು ತಿರಸ್ಕರಸಬಾರದು. ಇದು ಒಂದು ರೋಗವೆಂದು ಅಲಕ್ಷ್ಯ ಮಾಡಬಾರದು. ಒಂದು ವೇಳೆ ಅಲಕ್ಷ್ಯ ಮಾಡಿದರೆ ಆತ್ಮೀಕ ಸಾವು ಆಗಬಹುದು. ಈ ಒಂದು ಘಟನೆಯಲ್ಲಿ, ಈ ರೀತಿಯಾಗಿ ಆಯಿತು. ಮಗುವು ತಾಯಿಯ ತೊಡೆಯಲ್ಲಿ ಮರಣ ಹೊಂದಿತು. ನಮ್ಮ ಸೇವೆಯಲ್ಲಿ ಆತ್ಮೀಕ ಮರಣವನ್ನು ಎದುರಿಸಿದರೆ ಅಥವಾ ನಮ್ಮ ಆತ್ಮೀಕ ಪ್ರಯತ್ನಗಳಲ್ಲಿ, ನಾವು ಸಭೆಗೆ ಹೋಗಬೇಕು ಮತ್ತು ಕರ್ತನಾದ ದೇವರ ಬಳಿಗೆ ಬರಬೇಕು. ಅದು ನಮ್ಮ ತಾಯಿಯಾಗಿದೆ. ನಿಶ್ಚಯವಾಗಿ ನಮ್ಮ ರಕ್ಷಿಸುತ್ತದೆ. ಸತ್ತವರು ದೇವರಿಗೋಸ್ಕರ ಏನು ಮಾಡುವುದಕ್ಕೆ ಆಗುವುದಿಲ್ಲ. ಆತನಿಗಾಗಿ ಪ್ರಕಾಶಿಸುವುದಕ್ಕೆ ಆಗುವುದಿಲ್ಲ.

ಯೆಹೆಜ್ಕೇಲ 47:3-5 ನೀರಿನಲ್ಲಿ ಹೋಗಲು ಒಂದು ಸಾವಿರ ಮೊಳ ಆಳೆಯಲಾಗಿದೆ ಎಂದು ನಾವು ಓದುತ್ತೇವೆ. ಆ ಸಮಯದಲ್ಲಿ ನೀರು ಹಿಮ್ಮಡಿ ಹೊರಗೆ ಇತ್ತು. ನಂತರ ಒಂದು ಸಾವಿರ ಮೊಳ ಅಳೆಯಲಾಯಿತು, ನೀರು ಮೊಣಕಾಲಿನವರೆಗೆ ಇತ್ತು. ಮತ್ತೆ ಒಂದು ಸಾವಿರ ಮೊಳ ಅಳೆಯಲಾಗಿದೆ, ನೀರು ನಡುವಿನರೆಗೆ ಇತ್ತು. ನೀರು ನದಿಯಂತಿತ್ತು ಮತ್ತು ಪ್ರವಾದಿ ಅದನ್ನು ದಾಟಲು ಸಾಧ್ಯವಾಗಲಿಲ್ಲ. ಯಾಕೆ ದೇವರು ಸ್ವಲ್ಪ ಸ್ವಲ್ಪ ಅಳತೆ ಮಾಡಿದನು? ಕಾರಣ, ದೇವರು ಕೊಟ್ಟದ್ದರಲ್ಲಿ ಸರಿಯಾಗಿ ದಾಟಿದರೆ, ನಂತರ ಆಶೀರ್ವಾದಗಳು ಕೊಟ್ಟು ಅಳತೆಯಾಗುತ್ತವೆ. ಆದ್ದರಿಂದ, ಇಲ್ಲಿ ದೇವರು ಏನು ಪ್ರಕಟಿಸುತ್ತಾನೆ, ದೇವರು ಕೊಟ್ಟದನ್ನು ಸರಿಯಾಗಿ ಉಪಯೋಗಿಸಿದರೆ, ನಂತರ ಆಶೀರ್ವಾದಗಳು ನಮಗೆ ಬರುತ್ತವೆ. ನಾವು ಕೇವಲ ನಮ್ಮ ಸಭೆಯನ್ನು ಸರಿಯಾಗಿ ನೋಡಿಕೊಂಡರೆ ಅಥವಾ ದೇವರು ಕೊಟ್ಟ ಯಾವುದೇ ಸೇವೆಯನ್ನು ಸರಿಯಾಗಿ ಮಾಡಿದರೆ. ನಾವು ಸಮೃದ್ಧಿಯಾಗಿ ದೇವರ ಆಶೀರ್ವಾದಗಳನ್ನು ಪಡೆದುಕೊಳ್ಳುತ್ತೇವೆ ಮತ್ತು ಅದರಲ್ಲಿ ಬೆಳವಣಿಗೆಯನ್ನು ನಾವು ಕಾಣಬಹುದು.

ಅರಣ್ಯಕಾಂಡ 16:36-38 ನಾವು ಈ ರೀತಿಯಾಗಿ ಓದುತ್ತೇವೆ, **ಆಗ ಯೆಹೋವನು ಬಳಿಯಿಂದ ಬೆಂಕಿ ಹೊರಟು ಧೂಪವನ್ನು ಅರ್ಪಿಸುತ್ತಿದ್ದ ಆ ಇನ್ನೂರೈವತ್ತು ಮಂದಿಯನ್ನು ಭಸ್ಮಮಾಡಿತು, ಆಗ ಯೆಹೋವನು ಮೋಶೆಗೆ ಮಹಾಯಾಜಕ ಆರೋನನ ಮಗನಾದ ಎಲ್ಲಾಜಾರನು ಸುಟ್ಟು ಹೋದವರ ನಡುವೆಯಿಂದ ಆ ಧೂಪಾರತಿಗಳನ್ನು ಎತ್ತಬೇಕೆಂದು ಆಜ್ಞಾಪಿಸು; ಮತ್ತು ನೀನು ಅವುಗಳಲ್ಲಿರುವ ಕೆಂಡಗಳನ್ನು ದೂರಕ್ಕೆ ಚೆಲ್ಲು; ಆ ಧೂಪಾರತಿಗಳು ದೇವರ ವಸ್ತುವಾದವಲ್ಲಾ. ಪ್ರಾಣವನ್ನು ಹೋಗಲಾಡಿಸಿಕೊಂಡ ಆ ದೋಷಿಗಳ ಧೂಪಾರತಿಗಳು ಯೆಹೋವನ ಸನ್ನಿಧಿಗೆ ತರಲ್ಪಟ್ಟ ಕಾರಣ ಪರಿಶುದ್ಧವಾದವು; ಆದ್ದರಿಂದ ಅವುಗಳನ್ನು ತಗಡುಗಳಾಗಿ ಹೊಡೆದು ಯಜ್ಞವೇದಿಗೆ ಮುಚ್ಚಳವನ್ನು ಮಾಡಿಸಬೇಕು; ಹಾಗೆ ಅವು ಇಸ್ರಾಯೇಲ್ಯರಿಗೆ ನೆನಪು ಹುಟ್ಟಿಸುವವು ಎಂದು ಹೇಳಿದನು.**

ಪೆಟ್ಟಿಗೆ, ದೀಪಸ್ತಂಭಗಳು ಮತ್ತು ವೇದಿಯು ದೇವ ದರ್ಶನ ಗುಡಾರದ ಅದೇ ಸ್ಥಳದಲ್ಲಿ ಇರುತ್ತವೆ. ಆದರೆ ಧೂಪಾರತಿಗಳನ್ನು ಯಾಜಕನ ಕೈಯಲ್ಲಿ ಹಿಡಿಯಲಾಗುತ್ತದೆ ಮತ್ತು ಯಾಜಕನು ಎಲ್ಲಿಗೆ ಹೋದರೂ ಹೋಗುತ್ತಾನೆ. ಈಗ, ಧೂಪಾರತಿಗಳು ಬೇಡವಾದ ಸ್ಥಳಗಳಲ್ಲಿ ಸಿಕ್ಕಿ ಹಾಕಿಕೊಂಡಿದೆ. ಧೂಪಾರತಿಗಳು ಮಹಾ ಪರಿಶುದ್ಧ ಸ್ಥಳದ ಮೇಲೆ ಬರಬೇಕಾಗಿದೆ, ಆದರೆ ಇಲ್ಲಿ ನಾವು ಅದನ್ನು ಹೊರ ನ್ಯಾಯಾಲಯದಲ್ಲಿ ಕಾಣುತ್ತೇವೆ. ಧೂಪಾರತಿಗಳನ್ನು ಬಲಿಪೀಠವನ್ನು ಮುಚ್ಚಬಹುದಾದ ಸುತ್ತಿಗೆಯ ತಟ್ಟೆಗಳಾಗಿ ಮಾಡಬಹುದೆಂದು ಕರ್ತನು ಆಜ್ಞಾಪಿಸಿದನು. ನಮ್ಮ ಆಧ್ಯಾತ್ಮಿಕ ಬೆಳವಣಿಗೆಯು ಪರಲೋಕವನ್ನು ತಲುಪಬೇಕು ಮತ್ತು ದಾರಿಯಲ್ಲಿ ನಿಲ್ಲಬಾರದು ಎಂದು ನಾವು ಅರಿತುಕೊಳ್ಳಬೇಕು. ನಾವು ಪಡೆದುಕೊಂಡ ಪ್ರತ್ಯೇಕವಾದ ಆತ್ಮೀಕ ಅನುಭವದಲ್ಲಿ ತೃಪ್ತಿಯಾಗಬಾರದು. ನಾವು ನಿರಂತರವಾಗಿ ಆತ್ಮೀಕವಾಗಿ ಬೆಳೆಯಬೇಕು ಮತ್ತು ಆತನ ರಾಜ್ಯದಲ್ಲಿ ಪ್ರವೇಶಿಸುವುದಕ್ಕೆ ಸೇವೆ ಮಾಡಬೇಕು.

2. ಅರಸುಗಳು 4:21-35 ರಲ್ಲಿ ನಾವು ಇದನ್ನು ನೋಡುತ್ತೇವೆ, ಕತ್ತೆಯ ಮೇಲೆ ಇರುವ ಸತ್ತಂತ ಮಗುವನ್ನು ಎಬ್ಬಿಸಬೇಕಾದರೆ, ಸೇವಕ, ತಾಯಿ, ದೇವರ ಸೇವಕನು ಮತ್ತು ಆತನ ಸಹಾಯ ಅವರ ಪ್ರಯತ್ನವನ್ನು ಮಾಡಿದರು. ಈ ಐದು ವ್ಯಕ್ತಿಗಳು ಸುವಾರ್ತಿಕರಿಗೆ ಹೋಲಿಕೆಯಾಗಿದೆ. ಅಪೋಸ್ತಲರು, ಪ್ರವಾದಿಗಳು, ಸಭಾ ಪಾಲಕರು ಮತ್ತು ಬೋಧಕರು. ಇವರು ನಮಗೆ ಗರ್ಭದ ಆಶೀರ್ವಾದವನ್ನು ನೀಡುವ ಪ್ರಧಾನ ವ್ಯಕ್ತಿಗಳು. ಮೂರು ವ್ಯಕ್ತಿಗಳು ದೇವರ ಸೇವಕನಾದ ಎಲೀಷನ ಬಳಿಗೆ ಹೋಗುತ್ತಿದ್ದರು. ನಾಲ್ಕನೆಯ ವ್ಯಕ್ತಿಯು ಗೆಹಜಿ, ಪ್ರವಾದಿಯಾದ ಎಲಿಷನಿಗೆ ಸಹಾಯಕನ ಪ್ರವಾದಿಯ ಕೋಲಿನಿಂದ ಮಗುವನ್ನು ಬದುಕಿಸುವುದಕ್ಕೆ ಪ್ರಯತ್ನಸಿದನು. ಅವನು ಎಬ್ಬಿಸುವುದಕ್ಕೆ ಸೋತು ಹೋದ್ದರಿಂದ, ಅವರು ಮಗುವನ್ನು ಎಲಿಷನ ಬಳಿಗೆ ತೆಗೆದುಕೊಂಡು ಹೋದರು.

**ಎಲೀಷನು ಆ ಮನೆಯನ್ನು ಮುಟ್ಟಿದಾಗ ಸತ್ತ ಹುಡುಗನು ತನ್ನ ಮಂಚದ ಮೇಲೆ ಇಡಲ್ಪಟ್ಟಿರುವುದನ್ನು ಕಂಡು ಯಾರೂ ಒಳಗೆ ಬಾರದಂತೆ ಆ ಕೋಣೆಯ ಬಾಗಿಲನ್ನು ಮುಚ್ಚಿಕೊಂಡು ಯೆಹೋವನನ್ನು ಪ್ರಾರ್ಥಿಸಿದನು. ಅನಂತರ ಹುಡುಗನ ಮೇಲೆ ಬೋರ್ಲ ಬಿದ್ದು ತನ್ನ ಬಾಯಿ ಕಣ್ಣು ಕೈಗಳನ್ನು ಅವನ ಬಾಯಿ ಕಣ್ಣು ಕೈಗಳಿಗೆ ಮುಟ್ಟಿಸಿದ್ದರಿಂದ ಹುಡುಗನ ದೇಹವು ಬೆಚ್ಚಗಾಯಿತು. ಆ ಮೇಲೆ ಹುಡುಗನನ್ನು ಬಿಟ್ಟು ಎದ್ದು ಮನೆಯಲ್ಲಿ ತುಸು ಹೊತ್ತು ಅತ್ತಿತ್ತ ಅಡ್ಡಾಡಿ ತಿರುಗಿ ಅವನ ಮೇಲೆ ಬೋರ್ಲ ಬೀಳಲು ಹುಡುಗನು ಏಳು ಸಾರಿ ಸೀತು ಕಣ್ದೆರೆದನು.** 2 ಅರಸುಗಳು 4:32-35.

ಮಗುವನ್ನು ಬದುಕುಸುವುದಕ್ಕಾಗಿ ಎಲೀಷನು ಅನೇಕ ಕ್ರಮಗಳನ್ನು ಪ್ರಯತ್ನಿಸಿದನು. ಅತ್ತಿತ್ತ ನಡೆದಾಡಿ ಮತ್ತು ಅಂತಿಮವಾಗಿ ಮಗುವನ್ನು ಬದುಕಿಸಿದನು. ಅವನ ಪ್ರಯತ್ನಗಳನ್ನು ತನ್ನ ಮಗುವನ್ನು ಬಹಳ ನೋವು ಮತ್ತು ಶ್ರಮದಿಂದ ಹೆರಿಗೆ ಮಾಡುವ ತಾಯಿಗೆ ಹೋಲಿಸಬಹುದು.

ಅದೇ ರೀತಿಯಾಗಿ ದೇವರ ಸೇವಕರಗಳು ನೋವನ್ನು ಸಹಿಸಿಕೊಳ್ಳುತ್ತಾರೆ, ತನ್ನ ಮಗುವನ್ನು ಹೆರಿಗೆ ಮಾಡುವ ತಾಯಿಯಂತೆ, ಜನರ ಆಧ್ಯಾತ್ಮಿಕ ಜೀವನವು ನಾಶವಾಗದಂತೆ ಅವರು ಹೋರಾಡ ಬೇಕಾಗಿದೆ.

ಮಗು ಏಳು ಬಾರಿ ಸೀನಿದಾಗ ಮಗುವುದನ್ನು ಉಸಿರಾಟದ ವ್ಯವಸ್ಥೆಯನ್ನು ನಿರ್ಬಂಧಿಸುತ್ತಿದ್ದ ಧೂಳನ್ನು ತೆಗೆದು ಹಾಕಲಾಯಿತು. ದೇವರ ಸೇವಕರು ಸಹ ನೀವು ಜನರಿಗಾಗಿ ಪಟ್ಟ ಶ್ರಮವನ್ನು ತಲೆಕಡಿಸಿಕೊಳ್ಳಬಾರದು ಮತ್ತು ಗರ್ಭಾಶಯದ ಆಶೀರ್ವಾದವನ್ನು ಜನರಿಗೆ ವರ್ಗಾಯಿಸಬೇಕು.

★★★

RNI NO. 70107/98, Postal Regn. No. TN/CH (C)/195/21-23 WPP NO. TN/PMG(CCR)/WPP-219/21-23

## A good opportunity to get Echo of His Call monthly magazine at free of cost

If you could send the addresses of your friends / relatives through post, letter, e.mail, WhatsApp or phone to us, we will dispatch **Echo of His Call** monthly magazine to them at free of cost.

## OUR BANK DETAILS:

### *1. Bank : State Bank of India*

Branch : **Triplicane, Chennai-5**
Name : **S. Sam Selva Raj**
A/C No. : **1023 2934 679**
IFSC : **SBIN 00 00 249**
SWIFT CODE : **SBI NIN BB 455**

### *2. Bank : ICICI Bank*

Branch : **Anna Salai, Chennai-6**
Name : **Echo of His Call**
A/C No. : **6038 0502 2319**
IFSC : **ICIC 000 6038**

### *3. Bank : State Bank of India*

**(This Account is for Tax Exemption for Indians only )**

Branch : **Triplicane, Chennai-5**
Name : **Echo of His Call Educational Trust**
A/C No. : **1023 2923 805**
IFSC : **SBIN 00 00 249**

**Google Pay: 98410 71858**
**PayPal : SAM SELVA RAJ**

*****

**E.mail : sam@echoofhiscall.org**

# ECHO OF HIS CALL

Monthly magazines in 16 languages, Bible Colleges, Postal Courses, Church Planting, Village English High School, Gospel Printing Press, Crusades, Seminars, Social Services, etc.

**Annual Subscription : Rs. 100/-** **Life Subscription : Rs. 2000/-**

The multifarious activities of **Echo of His Call Ministries** are supported by the free-will offerings and donations of God's children like you. You may support **Echo of His Call** and its activities as the Lord leads you. We need your help to send forth the Gospel to the unreached people and plant Churches.

If you would like to receive **ECHO OF HIS CALL** magazines regularly, please write to us with your e.mail Id and Cell Phone number. Whenever you change your postal or e.mail addresses, please do inform us your old and new addresses.

**Echo of His Call** is available in 16 languages in our website also. You can read them by going into the site as well as downloading them and get blessed.

Your letters, prayer requests and your financial helps (**Money Orders, Cheques or Demand Drafts, NEFT, PayPal (Sam Selva Raj, sam@echoofhiscall.org) PhonePe (98410 71858), Gpay (98410 71858), Western Union, MoneyGram, etc.**) to **ECHO OF HIS CALL** may please be sent to the address below.

Please send your **Land Phone / Mobile Phone Numbers and E.mail addresses** for updation.

Our address :

**ECHO OF HIS CALL**
10, MOHAMMED ABDULLAH 2ND STREET, CHEPAUK, CHENNAI - 600 005, INDIA
PH: (+91-44) 2852 8282, 2852 9293, 2854 7766/ Cell: (+91) 98410 71852, 95661 31858 / E.mails: sam@echoofhiscall.org / biblecor@yahoo.co.in
Websites: www.echoofhiscall.org / www.stpaulsmatriculation.com

**YOU CAN SEND YOUR DONATION ONLINE ALSO**

**RNI NO. 70107/98**
**Postal Regn. No. TN/CH/(C)/195/21-23**
**WPP NO. TN/PMG(CCR)/WPP- 219/21-23**
**Date of Publication: Second week of every month**
**Date of Posting : 9th & 10th of every month**
**Posted at "Egmore RMS / 1 Patrika Channel"**
**on 10th NOVEMBER, 2022**
**If un-delivered please return to:**
**ECHO OF HIS CALL (KANNADA)**
**P.O. Box No. 2957,**
**Chepauk, Chennai - 600 005, INDIA.**
**Phone: (+ 91- 44) 2852 8282, 2852 9293, 2854 7766**

***JESUS LOVES YOU!***

**To**

***GOD BLESS YOU!***

Owned and published by **S. Sam Selva Raj** from New No. 8 & 10, Old No. 18 & 19, Mohammed Abdullah 2nd Street, Chepauk, Chennai-600 005 and printed by him at **Echo of His Call Printers**, New No. 8 & 10, Old No. 18 & 19, Mohammed Abdullah 2nd Street, Chepauk, Chennai-600 005. Editor: **S. Sam Selva Raj.**